# ಕೊಡಗಿನ ರಾಜಕಾರಣ: ೧೯೯೦ರಿಂದ ೨೦೧೮ರ ವರೆಗಿನ ಪ್ರವೃತ್ತಿ ಮತ್ತು ವಿವಾದಾಂಶಗಳ ಒಂದು ಅಧ್ಯಯನ

## ಸಂಶೋಧನಾ ಮಹಾಪ್ರಬಂಧದ ಅಂತಿಮ 'ಸಾರಲೇಖ'

ಸಂಶೋಧನಾ ವಿದ್ಯಾರ್ಥಿ

**ನೌಶಾದ್ ಹೆಚ್**

ಮಾರ್ಗದರ್ಶಕರು

**ಡಾ. ಶಹಬರ್ ಪಾಷ**

ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ
ವಿಶ್ವವಿದ್ಯಾನಿಲಯ ಕಾಲೇಜು,ಹಂಪನಕಟ್ಟೆ

ರಾಜ್ಯಶಾಸ್ತ್ರ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–೫೭೪೧೯೯

# ಕೊಡಗಿನ ರಾಜಕಾರಣ: ೧೯೯೦ರಿಂದ ೨೦೧೮ರ ವರೆಗಿನ ಪ್ರವೃತ್ತಿ ಮತ್ತು ವಿವಾದಾಂಶಗಳ ಒಂದು ಅಧ್ಯಯನ

ವಿಶ್ವದ ಹೆಚ್ಚಿನ ರಾಷ್ಟ್ರಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, ಪ್ರಗತಿ ಪಥದತ್ತ ಸಾಗುತ್ತಿರುವುದು ಆಧುನಿಕ ರಾಜಕೀಯ ವ್ಯವಸ್ಥೆಯನ್ನು ಅವಲೋಕಿಸಿದಾಗ ಮನನವಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ರಾಷ್ಟ್ರಗಳಲ್ಲಿಯೇ ಭಾರತವು ಅಗ್ರಮಾನ್ಯ ಸ್ಥಾನವನ್ನು ಪಡೆದಿದೆ. ಆದರೆ "ಈ ಅಮೋಘ ಸ್ಥಾನವನ್ನು ಪಡೆದ ಭಾರತದ ಕೆಲವು ರಾಜ್ಯದ ಆಂತರಿಕ ರಾಜಕೀಯ ವ್ಯವಸ್ಥೆ ಮಾತ್ರ ಅಸ್ಥಿರತೆಯಿಂದ ಕೂಡಿದ್ದು ರಾಷ್ಟ್ರದ ಏಕತೆ ಹಾಗೂ ಆರ್ಥಿಕ ಅಭಿವೃದ್ಧಿ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಪರಿಣಾಮಕಾರಿ ಹಾಗೂ ಪ್ರಬಲತೆಯನ್ನು ಪಡೆಯುವಲ್ಲಿ ಆಮೆವೇಗದಲ್ಲಿ ಸಾಗಿದೆ"[೧] ಪ್ರಜಾಪ್ರಭುತ್ವ ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕಾದರೆ, ಪ್ರಜಾಪ್ರಭುತ್ವದ ವಿಕೇಂದ್ರಿಕರಣ ಅವಶ್ಯಕ. ಈ ನಿಟ್ಟಿನಲ್ಲಿ ನೋಡುವುದಾದರೆ, ಒಂದು ರಾಷ್ಟ್ರದ, ರಾಜ್ಯದ, ಜಿಲ್ಲೆಯ ಬೆಳವಣಿಗೆಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿಯೂ ಕೂಡ ಕಂಡುಕೊಳ್ಳಬೇಕಾಗುತ್ತದೆ.

"ಹಳ್ಳಿಗಳು ಶ್ರೀಮಂತವಾದರೆ ರಾಷ್ಟ್ರವು ಶ್ರೀಮಂತವಾಗಬಹುದು ಹಳ್ಳಿಗಳು ನಾಶವಾದರೆ, ರಾಷ್ಟ್ರವೂ ನಾಶವಾದಂತೆ. ಆಗ ಭಾರತ ಭಾರತವಾಗಿ ಉಳಿಯದು. ವಿಶ್ವದಲ್ಲಿ ಅದರ ಅಸ್ಥಿತ್ವವೇ ನಾಶವಾದಂತೆ ಎಂಬುದು ಗಾಂಧೀಜಿಯವರ ಕಲ್ಪನೆಯಾಗಿದೆ."[೨] ಸಾಮಾನ್ಯವಾಗಿ ರಾಷ್ಟ್ರ ರಾಜಕಾರಣ,ರಾಜ್ಯ ರಾಜಕಾರಣ ಮತ್ತು ಜಿಲ್ಲೆಯ ರಾಜಕಾರಣದಲ್ಲಿ ವ್ಯತ್ಯಾಸಗಳಿದ್ದು, ಜಿಲ್ಲೆಯ ರಾಜಕಾರಣವು ಅನೇಕ ಸಂಕೀರ್ಣ ಸಮಸ್ಯೆಯನ್ನು ಹೊಂದಿರುತ್ತದೆ ಮತ್ತು ಭಿನ್ನ ನೆಲೆಯ ರಾಜಕೀಯ ಆಯಾಮವನ್ನು ಮುಂದಿಡುತ್ತದೆ.

ನನ್ನ ಈ ಸಂಶೋಧನಾ ಮಹಾಪ್ರಬಂಧವು ಕೊಡಗಿನ ರಾಜಕೀಯದ ಬಗ್ಗೆ ಅಧ್ಯಯನ ಮಾಡುತ್ತಾ, ಅದರಲ್ಲೂ ೧೯೯೦ರ ನಂತರ, ರಾಷ್ಟ್ರ ರಾಜಕಾರಣದಲ್ಲಿ ಮತ್ತು ರಾಜ್ಯ ರಾಜಕಾರಣದಲ್ಲಿ ಆದ ಪಲ್ಲಟ ಮತ್ತು ಸ್ಥಳೀಯ ವಿವಾದಾಂಶಗಳು ಯಾವ ರೀತಿ ಜಿಲ್ಲೆಯ ರಾಜಕೀಯದ ಮೇಲೆ ಪ್ರಭಾವ ಬೀರಿದೆ ಎಂಬುದನ್ನು ಅಧ್ಯಯನ ಮಾಡಿದೆ. ಮಾತ್ರವಲ್ಲದೆ ಇತ್ತೀಚಿನ (೨೦೧೮ರ ವಿಧಾನಸಭಾ ಚುನಾವಣೆಯವರೆಗೆ) ಆದ ರಾಜಕೀಯ ಪ್ರವೃತ್ತಿ ಮತ್ತು ವಿವಾದಾಂಶಗಳ ಕಡೆಗಿನ ಅಧ್ಯಯನಕ್ಕೆ ಹೆಚ್ಚಿನ ಒತ್ತು ನೀಡಿದೆ.

---

[1] "ಭಾರತದ ಕೆಲವು ರಾಜ್ಯಗಳಲ್ಲಿ ಪ್ರತ್ಯೇಕತಾವಾದದ ಕೂಗು ಕೇಳಿಸುತ್ತಾ ಬಂದಿದೆ.ಉದಾಹರಣೆಗೆ ಪಂಜಾಬಿನಲ್ಲಿ ಕಲಿಸ್ತಾನದ ಕೂಗು, ಜಾರ್ಖಾಂಡಿನಲ್ಲಿ ಪ್ರತ್ಯೇಕತೆಯ ಕೂಗು,ಅಸ್ಸಾಂ,ಮುಂತಾದ ಪ್ರದೇಶಗಳನ್ನು ಗಮನಿಸಬಹುದು.

[2] ಟಿ.ಕೆ.ಲಕ್ಷ್ಮಣ ಮತ್ತು ಬಿ.ಕೆ ನಾರಾಯಣ."ರೂರಲ್ ಡೆವಲಪ್ಮೆಂಟ್", ಹಿಮಾಲಯ ಪಬ್ಲಿಕೇಷನ್ ಹೌಸ್,ಬಾಂಬೆ.1983.

ಕೊಡಗಿನ ಇತ್ತೀಚಿನ ರಾಜಕೀಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅಧ್ಯಯನಗಳು ನಡೆಯದೇ ಇರುವುದರಿಂದ ಈ ಅಧ್ಯಯನವು ತನ್ನ ವಿಭಿನ್ನತೆಯಿಂದ ಹೆಚ್ಚಿನ ಸಂಶೋಧನಾ ಅಧ್ಯಯನಕ್ಕೆ ಅನುವು ಮಾಡಿಕೊಡಬಹುದು ಎಂಬುದು ನನ್ನ ನಂಬಿಕೆ. ಹಾಗೆಂದಾಕ್ಷಣ, ಕೊಡಗಿಗೆ ಸಂಬಂಧಿಸಿದಂತೆ ಅಧ್ಯಯನ ನಡೆದಿಲ್ಲ ಎಂದಲ್ಲ. ಕೊಡಗಿನ ರಾಜಕೀಯದ ಕುರಿತು ಈವರೆಗೆ ಅಧ್ಯಯನಗಳು ನಡೆದಿರುವುದು ಸೀಮಿತ ನೆಲೆಯಿಂದ. ರಾಜಕೀಯ ಪ್ರವೃತಿಗಳಿಗಿಂತಲೂ ಇಲ್ಲಿನ ವಿದ್ವಾಂಸರು ಸಾಂಸ್ಕೃತಿಕ ಅಂದರೆ ಜಾತಿ,ಬುಡಕಟ್ಟು, ಪ್ರಾದೇಶಿಕತೆ ಇತ್ಯಾದಿ ಅಂಶಗಳ ಕಡೆಗೆ ತಮ್ಮ ಅಕಾಡೆಮಿಕ್ ಬರಹಗಳನ್ನು, ಸಂಶೋಧನೆಗಳನ್ನು ಕೈಗೊಳ್ಳುವಲ್ಲಿ ಸಕ್ರೀಯರಾಗಿದ್ದಾರೆ. ಹಾಗೆ ನೋಡಿದರೆ ಐ.ಕೆ ಸುಬ್ಬಯ್ಯ, ಎಂ.ಸಿ ನಾಣಯ್ಯ, ಟಿ.ಪಿ ರಮೇಶ್‌ರಂತವರು ರಾಜಕೀಯ ವಲಯದೊಳಗೆ ನಿಂತು ತಮ್ಮ ರಾಜಕೀಯ ಪ್ರವೃತ್ತಿಗಳನ್ನು ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಅನುಭವ ಜನ್ಯವಾಗಿ ಕಟ್ಟಿಕೊಟ್ಟಿದ್ದಾರೆ. ಆದರೆ ಸಮಷ್ಠಿ ನೆಲೆಯಿಂದ ಈ ನಿರೂಪಣೆಗಳು ಪೂರ್ಣ ಪ್ರಮಾಣದ ರಾಜಕೀಯ ನಿರೂಪಣೆ ಕಟ್ಟಿಕೊಡುವಲ್ಲಿ ಸೋತಿದ್ದಾರೆ. ಇನ್ನು ಟಿ ಪಿ ವಿಜಯ, ವಿದ್ಯಾಧರ ಕುಡೆಕಲ್ಲು ಅವರಂತಹ ವಿದ್ವಾಂಸರು ಕೊಡಗಿನ ರಾಜಕೀಯ ನಿರೂಪಣೆಗಿಂತಲೂ ಹೆಚ್ಚಾಗಿ ಕೊಡಗಿನ ಚಾರಿತ್ರಿಕ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಚಿಂತನಾಧಾರೆಯ ಕಡೆಗೆ ತಮ್ಮ ಹೊಲವನ್ನು ನೆಟ್ಟರು. ಮಾತ್ರವಲ್ಲದೆ ಇಲ್ಲಿನ ಪತ್ರಕರ್ತರಿಗೆ, ಸಾಹಿತಿಗಳಿಗೆ, ಅಧ್ಯಾಪಕರಿಗೆ, ಕೊಡಗಿನ ರಾಜಕೀಯ ಪೂರ್ಣಪ್ರಮಾಣದ ಒಂದು ಅಧ್ಯಯನ ವಿಷಯವಾಗಿ ಪರಿಭಾವಿಸಿಕೊಳ್ಳಲು ಸಾಧ್ಯ ಆಗಲೇ ಇಲ್ಲ ಎಂಬುದು ಕಟು ಸತ್ಯ.

ಕೊಡಗಿನಲ್ಲಿ ರಾಜಕೀಯ ಚಿಂತನಾಧಾರೆ ಅಧ್ಯಯನ ವಿಷಯ ಆಗದಿರಲು ಪ್ರಮುಖ ಕಾರಣ.

೧. ಕೊಡಗು ಭೂ ಮಾಲೀಕರು ಮತ್ತು ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಭೂಪ್ರದೇಶ. ಕಾರ್ಮಿಕ ವರ್ಗ ಹೊರಗಿನವರಾದರು ಭೂಮಾಲೀಕರು ಮಾತ್ರ ಇದೇ ಪ್ರದೇಶದ ಮುಖ್ಯ ಜಾತಿಗಳಿಗೆ ಸೇರಿದವರಾದ ಕಾರಣ ಕೃಷಿ ಮುಖ್ಯ ವಿಚಾರಧಾರೆ ಯಾಯಿತೇ ಹೊರತು ರಾಜಕೀಯ ಅಲ್ಲ.

೨. ಪ್ರಾಕೃತಿಕವಾಗಿ ಮಳೆ,ಚಳಿ, ಮನುಷ್ಯ ಬದುಕಿನ ಅವಿಭಾಜ್ಯ ಅಂಗವಾದ ಕಾರಣ ಇಲ್ಲಿನ ಜನ ಸಾಧ್ಯತಃ ರಾಜಕೀಯದಿಂದ ದೂರ ಉಳಿದರು.

೩. ತಮಿಳುನಾಡು, ತುಳುನಾಡು, ಕೇರಳ, ಬೆಂಗಾಲಿ, ಅಸ್ಸಾಮಿ ಪ್ರದೇಶದಿಂದ ಬಂದ ಕಾರ್ಮಿಕ ವರ್ಗ ಇಲ್ಲಿನ ರಾಜಕೀಯದ ಬಗ್ಗೆ ಆರಂಭದಲ್ಲಿ ತಲೆಕೆಡಿಸಿಕೊಳ್ಳಲಿಲ್ಲ.

೪. ಇಲ್ಲಿನ ಮೂಲ ನಿವಾಸಿಗಳಾದ ಬುಡಕಟ್ಟು ಸಮುದಾಯಗಳು ರಾಜಕೀಯ ನಾಯಕತ್ವದ ಕೊರತೆ, ಮತ್ತು ಮೂಲಭೂತವಾದ ಬದುಕಿನ ನಿರ್ವಹಣೆಯ ಕೊರತೆಯಿಂದ ರಾಜಕೀಯದ ಕಡೆ ತಲೆ ಹಾಕಲಿಲ್ಲ.

೫. ಇಲ್ಲಿನ ಜನಸಮುದಾಯಕ್ಕಾಗಿರಬಹುದು, ಅಥವಾ ಸಾರ್ವಜನಿಕ ರಂಗದ ವಿದ್ವಾಂಸರು, ಪತ್ರಕರ್ತರು, ಸಮಾಜಸೇವಕರು, ಕೃಷಿಕರು, ಕೂಲಿಕಾರ್ಮಿಕರು, ಶಿಕ್ಷಕರು, ಸಾಹಿತಿಗಳು, ಅಧ್ಯಾಪಕರು ಇವರಾರು ಸಹ ಇಲ್ಲಿನ ಸಮಗ್ರ ರಾಜಕೀಯ ಪ್ರಕ್ರಿಯೆ ಬಗ್ಗೆ ಒಟ್ಟಂದದ ಅಧ್ಯಯನಕ್ಕೆ ಇಳಿಯಲೇ ಇಲ್ಲ. ಮಾತ್ರವಲ್ಲದೆ ಇಲ್ಲಿನ ಸಕ್ರೀಯ ರಾಜಕಾರಣಿಗಳೀಗೂ ಸಹ ಈ ಬಗೆಯ ಅಕಾಡೆಮಿಕ್ ಸಾಧ್ಯತೆಯ ಬಗ್ಗೆ ಗಮನಹರಿಸಬೇಕು ಎಂಬ ಅಭಿಲಾಷೆ ಇಲ್ಲದಿರುವುದೇ ವಿಪರ್ಯಾಸದ ಸಂಗತಿ.

ಆದರಿಂದ ಕೊಡಗಿನ ರಾಜಕೀಯದ ಕುರಿತಂತೆ ಅದರಲ್ಲೂ ಇತ್ತೀಚಿನ ಪವೃತ್ತಿ ಮತ್ತು ವಿವಾದಾಂಶಗಳ ಮೇಲೆ ಹೆಚ್ಚಿನ ಗಮನ ನೀಡಿರುವ ಅದ್ಯಯನಗಳು ಬಹಳ ಕಡಿಮೆ ಇರುವುದರಿಂದ ಕರ್ನಾಟಕದ ಈ ಪುಟ್ಟ ಜಿಲ್ಲೆಯಾದ ಕೊಡಗನ್ನು ಅಧ್ಯಯನ ಕೇಂದ್ರವಾಗಿ ಅಳವಡಿಸಿಕೊಳ್ಳಲಾಗಿದೆ. ಆ ಮೂಲಕ ಕೊಡಗಿನ ರಾಜಕೀಯ ಅಸ್ಮಿತೆಯ ಬಹುಮುಖ ಆಯಾಮವನ್ನು ಶೋಧಿಸುವ ಕಾರ್ಯವನ್ನು ಸಾಧ್ಯತಃ ನಿರ್ವಹಿಸಲಾಗಿದೆ.

## ಕೊಡಗಿನ ರಾಜಕೀಯದ ಸಂಕ್ಷಿಪ್ತ ಹಿನ್ನಲೆ

ಈ ಭಾಗದಲ್ಲಿ ಕೊಡಗಿನ ರಾಜಕೀಯದ ಕುರಿತು ಸ್ಥೂಲವಾದ ಪರಿಚಯ ನೀಡಲಾಗಿದೆ.ಈ ಬಗ್ಗೆ ವಿಸ್ತಾರವಾದ ವಿವರಗಳು ಅಧ್ಯಾಯ ೨ ರಲ್ಲಿ ನೀಡಲಾಗಿದೆ.

ಕೂರ್ಗ್ ಎಂದು ಇಂಗ್ಲೀಷ್ ಆಳರಸರಿಂದ ಪ್ರಚಾರಗೊಂಡ ಕೊಡಗು ಎನ್ನುವ ಪದ, ಇಂದು ಎಲ್ಲೆಡೆ ಜನಜನಿತವಾಗಿದೆ.ಕೊಡಗು ಜಿಲ್ಲೆ ಕರ್ನಾಟಕದಲ್ಲಿ ದಟ್ಟ ಅರಣ್ಯದಿಂದ ಕೂಡಿದ ಹಾಗೂ ಅತೀ ಸುಂದರವಾದ ಬೆಟ್ಟ ಗುಡ್ಡಗಳನ್ನು ಹೊಂದಿರುವ ಮತ್ತು ಭೋರ್ಗರೆಯುವ ಕಾವೇರಿ, ಹಾರಂಗಿ, ಪಯಸ್ವಿನಿ, ಲಕ್ಷ್ಮಣತೀರ್ಥ, ಬರಪೊಳೆ ಮೊದಲಾದ ನದಿಗಳನ್ನು ಹೊಂದಿರುವ, ಫಲವತ್ತಾದ ಭೂಪ್ರದೇಶವಾಗಿದೆ.

ಬ್ರಿಟಿಷರ ಕಾಲಘಟ್ಟದಲ್ಲಿ ಕೊಡಗಿನ ಸೌಂದರ್ಯಕ್ಕೆ ಮಾರುಹೋದ ಬ್ರಟಿಷ್ ಅಧಿಕಾರಿಗಳು ತಮ್ಮ ಕೇಂದ್ರನೆಲೆಯನ್ನು ಇಲ್ಲೆ ಸ್ಥಾಪಿಸಲು ಹೊರಟರು. ಇಲ್ಲಿನ ಕಾಫಿ ಪ್ಲಾಂಟೇಷನ್ಗಳು ಅವರ ಕಾಲದಲ್ಲಿ ನಿರ್ಮಾಣವಾಯಿತು. ಇಂಗ್ಲೇಂಡ್ ಮತ್ತು ಸ್ಕಾಟ್‌ಲ್ಯಾಂಡ್‌ನ ಹವಾಮಾನವನ್ನು ಹೋಲುವ ಕಾರಣಕ್ಕಾಗಿ ಈ ಪ್ರದೇಶವು ಬ್ರಿಟೀಷರ ಅಚ್ಚುಮೆಚ್ಚಿನ ತಾಣವಾಯಿತು. ಇಲ್ಲಿನ ಜನಸಮುದಾಯವು ಬ್ರಿಟಿಷರೊಂದೀಗೆ ಸೌಹರ್ದವಾಗಿಯೇ ನಡೆದುಕೊಂಡ ಹಲವು ಉದಾಹರಣೆಗಳನ್ನು ಕಾಣಬಹುದು.

ಈ ಪ್ರದೇಶವನ್ನು ಇದರ ನೈಸರ್ಗಿಕ ಸೌಂದರ್ಯದ ಮೋಹತೆಗಾಗಿ, ದಕ್ಷಿಣ ಕಾಶ್ಮೀರ ಮತ್ತು ಭಾರತದ ಸ್ಕಾಟ್ಲೆಂಡ್ ಎಂದು ಹಲವರು ಕರೆದಿರುವರು.

ಕರ್ನಾಟಕ ರಾಜ್ಯದ ಅತೀ ಚಿಕ್ಕಜಿಲ್ಲೆಯಾದ ಕೊಡಗು ಜಿಲ್ಲೆಯು ರಾಜ್ಯದ ನೈರುತ್ಯ ಮೂಲೆಯಲ್ಲಿದೆ. ಇಲ್ಲಿನ ಜನಸಂಖ್ಯೆಯು ೫,೫೪,೫೧೯[3](೨೦೧೧ರ ಜನಗಣತಿ ಪ್ರಕಾರ) ಮತ್ತು ೪೧೦೨ ಚದರ ಕಿಮೀ ವಿಸ್ತೀರ್ಣ ಹೊಂದಿದೆ. ಕೊಡಗು ಜಿಲ್ಲೆಯು ಉತ್ತರದಲ್ಲಿ ಮತ್ತು ಪೂರ್ವದಲ್ಲಿ ಹಾಸನ, ಮೈಸೂರು ಜಿಲ್ಲೆಗಳಿವೆ. ಪಶ್ಚಿಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ದಕ್ಷಿಣದಲ್ಲಿ ಕೇರಳ ರಾಜ್ಯದಗಡಿ ಪ್ರದೇಶವನ್ನು ಹೊಂದಿದೆ.

[4]

[3] http://www.censusindia.co.in>states>karnataka
[4] https://kvkkodagu.icar.gov.in/Map.php

ಕೊಡಗು ಎನ್ನುವ ಪ್ರಾಂತ್ಯ ಬ್ರಿಟಿಷರು ಆಡಳಿತ ವಹಿಸಿಕೊಳ್ಳುವವರೆಗೂ ಒಂದೇ ರೀತಿಯ ಭೂಪ್ರದೇಶವನ್ನು ಹೊಂದಿರಲಿಲ್ಲ. ಬೇರೆ ಬೇರೆ ಕಾಲಗಟ್ಟದಲ್ಲಿ ಕೊಡಗು ಬೇರೆ ಬೇರೆ ರೀತಿಯ ಭೌಗೋಳಿಕ ಅಸ್ಥಿತ್ವವನ್ನು ಹಾಗೂ ರಾಜಕೀಯ ಹಿನ್ನಲೆಯನ್ನು ಹೊಂದಿತ್ತು. ಪ್ರಾಚೀನ ಕಾಲದಿಂದ ಬ್ರಿಟಿಷರವರೆಗೆ, ಕೊಡಗಿನ ಬೇರೆ ಬೇರೆ ಭೂಭಾಗಗಳನ್ನು ಗಂಗ, ಚೋಳ, ಕದಂಬ, ಹೊಯ್ಸಳ, ಚಾಲುಕ್ಯ ಹಾಗೂ ವಿಜಯನಗರ ಅರಸರ ಸಾಮಂತ ಮಹಾಶಯರ ಆಳ್ವಿಕೆಗೆ ಒಳಪಟ್ಟಿದ್ದು, ಇತಿಹಾಸದಿಂದ ಮನದಟ್ಟಾಗುತ್ತದೆ.[೫]

ಕೊಂಗಾಳ್ವ, ಚೆಂಗಾಳ್ವರು ಕೊಡಗನ್ನು ಆಳಿದಾಗ ಇವರ ಕಾಲದಲ್ಲಿ ಈಗಿನ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಕೊಡಗಿನ ಭೂಪಟದಲ್ಲಿತ್ತು. ಮತ್ತು ಲಿಂಗಾಯಿತ ಅರಸರ ಕಾಲದಲ್ಲಿ ಕೊಡಗು ಭೂಪ್ರದೇಶಕ್ಕೆ ೭,೦೦೦ ಸೀಮೆ ಪ್ರದೇಶಗಳು ಸೇರಿತ್ತು. ೧೮ನೇ ಶತಮಾನದ ಅಂತ್ಯದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಕೂಡ ಕೊಡಗನ್ನು ಆಳಿದರು.

೧೮೩೪ಕ್ಕಿಂತ ಮೊದಲು ಕೊಡಗು ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಪುತ್ತೂರಿನವರೆಗೂ ವ್ಯಾಪಿಸಿತ್ತು. ೧೮೩೪ರಲ್ಲಿ ಬ್ರಿಟಿಷರು ಕೊಡಗನ್ನು ಆಕ್ರಮಿಸಿಕೊಂಡ ನಂತರ, ಸುಳ್ಯ, ಪುತ್ತೂರು ಮುಂತಾದ ಪ್ರದೇಶಗಳನ್ನು ಮದ್ರಾಸ್ ಪ್ರೆಸಿಡೆನ್ಸಿಯ ಆಡಳಿತಾಂಗಕ್ಕೆ ಹಸ್ತಾಂತರಿಸಲಾಗಿತ್ತು.

ಈಗ ನಾವು ಕಾಣುತ್ತಿರುವ ಕೊಡಗು,೧೮೩೪ರಲ್ಲಿ ಬ್ರಿಟಿಷರು ತಮ್ಮ ನೇರ ಆಳ್ವಿಕೆಗೆ ವಶಪಡಿಸಿಕೊಂಡ ಭೂಭಾಗವೇ ಆಗಿದೆ. ೧೮೩೪ರಿಂದ ೧೯೪೭ರತನಕ, ಕೊಡಗು ಬ್ರಿಟೀಷರ ಆಡಳಿತದಲ್ಲಿತ್ತು. ೧೯೪೭ ರಲ್ಲಿ ಈ ಪ್ರದೇಶ, ಬ್ರಿಟೀಷರ ಅಧಿಕಾರದಿಂದ ಮುಕ್ತವಾಗಲು, ೧೯೫೬ರವರೆಗೂ, ಕೊಡಗು ಕರ್ನಾಟಕ ರಾಜ್ಯದೊಳಗೆ ಸೇರದೆ, ತನ್ನ ಪ್ರತ್ಯೇಕ ಅಸ್ಥಿತ್ವವನ್ನು ಉಳಿಸಿಕೊಂಡಿತ್ತು.

೧೯೨೪ರಿಂದ ೧೯೪೭ರವರೆಗೂ ಕೊಡಗಿನ ಶಾಸನಸಭೆ, ಸ್ಥಳೀಯರ ಪ್ರತಿನಿಧಿತ್ವದೊಂದಿಗೆ ಬ್ರಿಟಿಷ್ ಆಳರಸರ ಕೃಪೆಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ೧೯೪೭ರಿಂದ ೧೯೫೬ರವರೆಗೆ ಕೊಡಗಿನಜನರಿಂದ ಚುನಾಯಿತಗೊಂಡ ಶಾಸನಸಭೆಯು ಕೊಡಗು ಪ್ರಾಂತ್ಯದ ಆಡಳಿತ ನಿರ್ವಹಿಸಲು ಒಬ್ಬ ಮುಖ್ಯಮಂತ್ರಿಯನ್ನು ಹಾಗೂ ಸಚಿವ ಸಂಪುಟವನ್ನು ಚುಣಾಯಿಸಿ ಪ್ರತ್ಯೇಕ ರಾಜ್ಯವಾಗಿ ಕಾರ್ಯನಿರ್ವಹಿಸಲು ಕಾರಣವಾಯಿತು. ನಂತರ, ಭಾಷಾವಾರು ಪ್ರಾಂತ್ಯಗಳ ರಚನಾ ಸಂದರ್ಭದಲ್ಲಿ ೧೯೫೬ ನವೆಂಬರ್ ೧ ರಂದು ಕೊಡಗು ಮೈಸೂರು ಪ್ರಾಂತ್ಯದೊಂದಿಗೆ ವಿಲೀನವಾಯಿತು.[೬] ಮುಂದೆ

[5] ಡಿ.ಎನ್.ಕೃಷ್ಣಯ್ಯ,"ಕೊಡಗಿನ ಇತಿಹಾಸ", ಪ್ರಸಾರಂಗ, ಮೈಸೂರು, ೧೯೭೪.

[೬]ಪೂಣಚ್ಚ ತಂಬಂಡ ವಿಜಯ್ "ಆಧುನಿಕ ಕೊಡಗು"ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೦.

ಕೊಡಗು ತನ್ನ ರಾಜಕೀಯ ಸಾಮಾಜಿಕ ಆರ್ಥಿಕ ಕ್ರಿಯಾವಿಧಿಯನ್ನು ಮೈಸೂರು(ಕರ್ನಾಟಕ) ಮತ್ತು ಕನ್ನಡ ಭಾಷಿಕ ಸಂರಚನೆಯ ಮೂಲಕ ಕಂಡುಕೊಳ್ಳಲು ಆರಂಭಿಸಿತು.ಅಲ್ಲಿಂದ ಮುಂದೆ ನಡೆದ ಒಟ್ಟು ರಾಜಕೀಯ ಪ್ರಕ್ರಿಯೆಗಳು ಕರ್ನಾಟಕದ ರಾಜಕಾರಣ ಜೊತೆಗಿನ ಸಂಯೋಜಿತ ಅಂಶವಾಗಿ ನಾನು ಅಧ್ಯಯನಕ್ಕೆ ಒಳಪಡಿಸಿದ್ದೇನೆ.ಮಾತ್ರವಲ್ಲದೆ ಇತಿಹಾಸ ಮತ್ತು ಪ್ರಸ್ತುತತೆಯನ್ನು ಸಮ್ಮಿಶ್ರಗೊಳಿಸಿದ ನಿರೂಪಣೆಗಳನ್ನು ಇಲ್ಲಿ ಕಾಣಬಹುದಾಗಿದೆ.

## ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ರಾಜಕಾರಣವು ಜನರ ಜೀವನದ ಮೇಲೆ ಮತ್ತು ಸಂಸ್ಕೃತಿಯ ಮೇಲೆ ಸಾಕಷ್ಟು ಪ್ರಭಾವ ಬೀರುತ್ತದೆ. ೨೦ನೇ ಮತ್ತು ೨೧ನೇ ಶತಮಾನದ ಬದಲಾಗುತ್ತಿರುವ ರಾಜಕೀಯ ಸ್ಥಿತಿಗತಿಯ ಪ್ರಭಾವ ಕೊಡಗಿನಲ್ಲಿ ಪರಿಣಾಮಕಾರಿಯಾಗಿ ಬೀರಿರುವ ಹಿನ್ನೆಲೆಯಲ್ಲಿ ಪ್ರಸ್ತುತ ರಾಜಕಾರಣದ ಬಗ್ಗೆ ವಿವರಣೆ ನೀಡುವ ಉದ್ದೇಶದಿಂದ**' ಕೊಡಗಿನ ರಾಜಕಾರಣ ೧೯೯೦ರಿಂದ ೨೦೧೮ ರವರೆಗಿನ ಪ್ರವೃತ್ತಿ ಮತ್ತು ವಿವಾದಾಂಶಗಳ ಒಂದು ಅಧ್ಯಯನ'** ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನವನ್ನು ರೂಪಿಸಿದ್ದೇನೆ.ಆ ಮೂಲಕ ಸಮಗ್ರ ಕೊಡಗಿನ ರಾಜಕೀಯ ಚಿಂತನಾಧಾರೆಯ ಆಳ-ಅಗಲವನ್ನು ಕಂಡುಕೊಳ್ಳಲು ಸಾಧ್ಯತಃ ಮುಂದಡಿ ಇಟ್ಟಿದ್ದೇನೆ.

ಈ ಅಧ್ಯಯನದಲ್ಲಿ ಮುಖ್ಯವಾಗಿ ಶಾಂತಿಪ್ರಿಯ ಜಿಲ್ಲೆಯಾದ ಕೊಡಗಿನಲ್ಲಿ ೧೯೯೦ರ ನಂತರ ಬದಲಾದ ಜಾತಿ ಮತ್ತು ಧಾರ್ಮಿಕ ರಾಜಕಾರಣದಿಂದ ಕೊಡಗಿನ ರಾಜಕೀಯದ ಮೇಲೆ ಬೀರಿದ ಪರಿಣಾಮ ಮತ್ತು ಪ್ರಭಾವವನ್ನು ಸೂಕ್ಷ್ಮ ಅವಲೋಕನ ಮಾಡಿದ್ದೇನೆ. ಅಂದರೆ ಭಾರತದ ಇತಿಹಾಸದಲ್ಲಿ ೧೯೯೨ ರಲ್ಲಿ ನಡೆದ  ಬಾಬರಿ ಮಸೀದಿ ಮತ್ತು ರಾಮಮಂದಿರಕ್ಕೆ ಸಂಬಂಧಿಸಿದ  ರಾಜಕೀಯ ವಿದ್ಯಮಾನವು ದೇಶದ ಒಟ್ಟು ರಾಜಕಾರಣದ ಮೇಲೆ ಪರಿಣಾಮ ಬೀರಿರುವುದು ಸುಳ್ಳಲ್ಲ. ಕೋಮುಧ್ರುವೀಕರಣ, ಕೋಮುಸಂಘರ್ಷ, ಧಾರ್ಮಿಕ ಮೂಲಭೂತವಾದಿ ಮನಸ್ಥಿತಿಯನ್ನು ರಾಜಕೀಯದ ಬಂಡವಾಳವಾಗಿಸುವ ಪ್ರಕ್ರಿಯೆಗೆ ಇದು ಚಾಲನೆ ನೀಡಿತು.

೧೯೯೦ರ ನಂತರ ಉದ್ಭವವಾದ ಬಂಡಾಯ ಅಥವಾ ಪ್ರತ್ಯೇಕತಾ (ಸ್ವಾಯತ್ತತೆಯ) ರಾಜಕಾರಣ ಮತ್ತು ಅದರಿಂದ ರಾಜಕೀಯದ ಮೇಲೆ ಉಂಟಾದ ಪ್ರಭಾವವನ್ನು ವಿಶ್ಲೇಷಣೆ ಮಾಡುತ್ತಾ ಈ ಒಂದು ಪ್ರಬಂಧವನ್ನು ರಚಿಸಲಾಗಿದೆ.

ತೊಂಬತ್ತರ ದಶಕದಲ್ಲಿ ಕೊಡಗು ಜಿಲ್ಲೆಗೆ ದಕ್ಷಿಣ ಕನ್ನಡ ಮತ್ತು ಸಮೀಪದ ಕೇರಳ ರಾಜ್ಯದಿಂದ ಆಗಮಿಸಿದ ವಲಸಿಗರಿಂದ ಕೊಡಗಿನ ರಾಜಕಾರಣದ ಮೇಲೆ ಬೀರಿದ ಪ್ರಭಾವವನ್ನು ನನ್ನ ಸಂಶೋಧನಾ

ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ. ಕಾಫಿ, ಕಾಳುಮೆಣಸು ಪ್ಲಾಂಟೇಷನ ಕಾರಣಕ್ಕಾಗಿ ಆಗಮಿಸಿದ ತುಳುನಾಡಿನ ಬಿಲ್ಲವರು,ಬಂಟರು,ಕೇರಳಭಾಗದ ಮುಸ್ಲಿಂ,ಕ್ರೈಸ್ತ ಮತ್ತು ತೀಯರು,ತಮಿಳುನಾಡಿನ ತಮಿಳರು ಇವರೆಲ್ಲರು ಮುಂದೆ ಕೊಡಗಿನ ಕೊಡವರು,ಗೌಡರು, ಮತ್ತು ಬುಡಕಟ್ಟು ಜನಾಂಗದವರ ಜೊತೆಯಲ್ಲಿ ರಾಜಕೀಯದ ವಿಭಿನ್ನ ಹಾದಿಯನ್ನು ತುಳಿಯುವಲ್ಲಿ ಯಶಸ್ವಿಯಾದ ವಿಚಾರಗಳ ಕಡೆಗೂ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಕೊಡವರು ವಿಶೇಷವಾಗಿ ಸಿಎನ್‌ಸಿ ಪರವಾದ ಪ್ರತ್ಯೇಕತಾವಾದಿ (ಸ್ವಾಯತ್ತತೆಯ) ಹೋರಾಟದ ನಿರೂಪಣೆ ಮತ್ತು ಇತರ ಜಾತಿ–ಧರ್ಮಗಳ ಏಕತೆಯ ಆಯಾಮದ ಧಾರ್ಮಿಕತೆಯ ನಿರೂಪಣೆಯಿಂದ ಹುಟ್ಟಿಕೊಂಡ ಧಾರ್ಮಿಕ ಮೂಲಭೂತವಾದಿ ಪ್ರತಿಪಾದನೆ, ಕೊಡಗಿನ ಸಾಮಾಜಿಕ ಜೀವನದಲ್ಲಿ ಯಾವರೀತಿ ಪ್ರಭಾವಿಸಿದೆ ಎಂಬ ವಿಷಯವನ್ನು ವಿಸ್ತೃತವಾಗಿ ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.

ಪ್ರಾದೇಶಿಕ ಮತ ಕ್ಷೇತ್ರಗಳ ವಿಂಗಡನೆಯಿಂದ ರಾಜಕೀಯದ ಮೇಲೆ ಬೀರಿರುವ ಪ್ರಭಾವವನ್ನು ಕೂಡ ಚರ್ಚಿಸಲಾಗಿದೆ.

ಸಿ.ಎನ್.ಸಿಯ ಎಸ್ ಟಿ ಟ್ಯಾಗ್ ಬೇಡಿಕೆ ಮತ್ತು ಬಂದೂಕು ಒಡೆತನ, ಕೊಡವ ಭಾಷೆ ಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸುವ ಬೇಡಿಕೆ, ಇತ್ಯಾದಿ ಅಂಶ ಹೇಗೆ ರಾಜಕೀಯ ಸ್ವರೂಪ ಪಡೆದವು ಎಂಬುವುದನ್ನು ಇಲ್ಲಿ ಅವಲೋಕನ ಮಾಡಲಾಗಿದೆ.

ಅದೇ ರೀತಿ, ರಾಜಕೀಯ ಪಕ್ಷಗಳು ಹಾಗೂ ನಾಯಕರುಗಳಿಗೆ ಕೊಡಗಿನ ರಾಜಕಾರಣದ ಮೇಲೆ ಇರುವ ನಿಲುವುಗಳು ಹಾಗೂ ಜಿಲ್ಲೆಯಲ್ಲಿ ಆದ ಅಭಿವೃದ್ಧಿಯ ಪರ ಮತ್ತು ವಿರೋಧ ವಾದಗಳು; ಆ ಮೂಲಕ ರಾಜಕೀಯ ದಾಳವಾಗಿ ಈ ವಿಷಯವನ್ನು ಬಳಸಿಕೊಂಡಿದ್ದನ್ನು ವಿವರಣಾತ್ಮಕವಾಗಿ ಈ ಪ್ರೌಢ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಪಕ್ಷಕೇಂದ್ರಿತ ರಾಜಕಾರಣ,ವ್ಯಕ್ತಿಕೇಂದ್ರಿತ ರಾಜಕಾರಣ, ಧರ್ಮಕೇಂದ್ರಿತ ರಾಜಕಾರಣ,ಜಾತಿಕೇಂದ್ರಿತ ರಾಜಕಾರಣ,ಪ್ರಗತಿಕೇಂದ್ರಿತ ರಾಜಕಾರಣ,ಸ್ವಜನ ಪಕ್ಷಪಾತಿ ಧೋರಣೆಯ ರಾಜಕಾರಣ,ಸಿದ್ದಾಂತ ಆಧಾರಿತ ರಾಜಕಾರಣ ಹಾಗೂ ಸ್ವಾಯತ್ತತಾ ರಾಜಕಾರಣದ ಹಲವು ನೆಲೆಗಳನ್ನು ಈ ಅಧ್ಯಯನದಲ್ಲಿ ಸಾಧ್ಯತಃ ಪರಿಶೀಲಿಸಲಾಗಿದೆ.

## ಅಧ್ಯಯನದಲ್ಲಿ ಬಳಸಿಕೊಳ್ಳಲಾಗುವ ಊಹೆಗಳು (ಪ್ರಾಕಲ್ಪನೆ)

ಊಹೆಗಳು ಸಂಶೋಧನಾಕಾರ್ಯಕ್ಕೆ ದಾರಿದೀಪಗಳು. ಈ ಊಹೆಗಳು ಬೌದ್ಧಿಕ ವಿಚಾರಧಾರೆ ಹಾಗೂ ಪ್ರಯೋಗಾತ್ಮಕ ಸಾಕ್ಷ್ಯಾಧಾರಗಳ ಆಧಾರದ ಮೇಲೆ ರಚಿತವಾಗಿದ್ದರೂ ಸಹ, ಕಾಲದ ಮಿತಿಯಲ್ಲಿ ಹಾಗೂ ವಿಚಾರದ ಹಿನ್ನಲೆಯ ವಿಮರ್ಶೆಯ ಮೂಲಕ ಈ ಊಹೆಗಳು ಎಷ್ಟರ ಮಟ್ಟಿಗೆ ಸರಿ ಅಥವಾ ತಪ್ಪಾಗಿದೆ ಎಂದು ನಿರ್ಧರಿಸಿ ಈ ಸಂಶೋಧನಾ ಅಧ್ಯಯನಕ್ಕೆ ವೈಜ್ಞಾನಿಕ ಚೌಕಟ್ಟನ್ನು ಒದಗಿಸಲು ಪ್ರಯತ್ನಿಸಲಾಗಿದೆ. ಈ ಕೆಳಗಿನ ಊಹೆಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನ ನಡೆಸಲಾಗಿದೆ.

೧) "ಕೊಡಗಿನ ರಾಜಕಾರಣದ ಮೇಲೆ ಜಾತಿರಾಜಕಾರಣ ಮತ್ತು ವರ್ಗ ರಾಜಕಾರಣ ಪ್ರಭಾವ ಬೀರಿರಲು ಸಾಧ್ಯವಿದೆ".

೨) "ಇತ್ತೀಚಿನ ಕೊಡಗಿನ ರಾಜಕಾರಣವು ಬಲಪಂಥೀಯ ರಾಜಕೀಯದ ಕಡೆಗೆ ವಾಲಿದೆ."

೩) "ಪ್ರತ್ಯೇಕತಾ (ಸ್ವಾಯತ್ತತೆಯ) ಹೋರಾಟಕ್ಕೆ ಜಾತಿ ಅಸ್ಮಿತೆಯು ಒಂದು ಕಾರಣವಾಗಿದೆ."

೪) "ಕೊಡಗಿನ ರಾಜಕಾರಣದಲ್ಲಿ ಕೊಡಗಿನ ಪ್ರಬಲ ಜಾತಿಗಳಿಗೆ ಮಾತ್ರ ಪ್ರಾತಿನಿಧ್ಯವಿದೆ"

೫) "ತಳಸಮುದಾಯ ಮತ್ತು ಅಲ್ಪಸಂಖ್ಯಾತ ಸಮುದಾಯಗಳಲ್ಲಿ ರಾಜಕೀಯ ಹಿಂದುಳಿದಿರುವಿಕೆ ಯನ್ನು ಕಂಡಿದೆ."

## ಅಧ್ಯಯನದ ಉದ್ದೇಶ, ಪ್ರಾಮುಖ್ಯತೆ ಮತ್ತು ಸಾಧ್ಯತೆಗಳು

ಒಂದು ಜಿಲ್ಲೆಯ ಜನರ ಆಶೋತ್ತರಗಳನ್ನು ಪೂರೈಸುವಲ್ಲಿ ಮತ್ತು ಜಿಲ್ಲೆಯ ಅಭಿವೃದ್ಧಿಯಲ್ಲಿ ಹಾಗೂ ಜನರ ಅಳಿವು ಮತ್ತು ಉಳಿವು ಅಸ್ಥಿತ್ವ ಮತ್ತು ಯಶಸ್ಸನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಸ್ಥಳೀಯ ರಾಜಕೀಯವು ಪ್ರಮುಖ ಪಾತ್ರವಹಿಸುತ್ತದೆ.

ಕೊಡಗಿನ ವಿಚಾರವನ್ನು ತಿಳಿಯುವ ಸಲುವಾಗಿ ಅನೌಪಚಾರಿಕ ಚರ್ಚೆ ವಿಚಾರ ವಿನಿಮಯ, ನೌಕರಶಾಹಿ, ಪ್ರಮುಖವಾಗಿ ಜನಸಾಮಾನ್ಯರು,ಪತ್ರಕರ್ತರು ಎಲ್ಲಕ್ಕಿಂತ ಮಿಗಿಲಾಗಿ, ಜಿಲ್ಲಾ ಮಟ್ಟದ ರಾಜಕಾರಣಿಗಳನ್ನು ಈ ಅಧ್ಯಯನದ ಪರಿಮಿತಿಯಲ್ಲಿ ತೆಗೆದುಕೊಂಡು, ಈ ಉದ್ದೇಶದ ಸಾಧನೆಗಾಗಿ ಸೈದ್ಧಾಂತಿಕ ಸಂಶೋಧನಾ ಮಾರ್ಗಗಳನ್ನು ಹಮ್ಮಿಕೊಂಡು ಅಧ್ಯಯನದ ಸಾಧನಯೆಡೆಗೆ ಪ್ರಯತ್ನ ಮಾಡಲಾಗಿದೆ.

೧) ಜಿಲ್ಲೆಯ ಅಭಿವೃದ್ಧಿಗೆ ಚುನಾಯಿತ ಪ್ರತಿನಿಧಿಗಳು ಯಾವ ರೀತಿಯ ಕಾರ್ಯನಿರ್ವಹಣೆ ಮಾಡಿದ್ದಾರೆ ಎಂಬುದನ್ನು ತಿಳಿಯಲಾಗಿದೆ.

೨) ಜಿಲ್ಲೆಯ ಬೆಳವಣಿಗೆಯ ಕಾರ್ಯಚಟುವಟಿಕೆಗಳನ್ನು ನೆರವೇರಿಸುವಲ್ಲಿ ಕೊಡಗಿನ ರಾಜಕೀಯವು ಯಾವ ರೀತಿಯ ಪಾತ್ರವಹಿಸಿದೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

೩) ಕೊಡಗಿನ ಪ್ರತಿಯೊಬ್ಬ ವ್ಯಕ್ತಿಯೂ, ರಾಜಕೀಯದಲ್ಲಿ ಭಾಗವಹಿಸುವುದರಿಂದ ಅವರಿಗೆ ರಾಜಕೀಯದ ಅರಿವು ತಿಳಿಯುವುದಲ್ಲದೆ, ಜಿಲ್ಲೆಯ ಬೆಳವಣಿಗೆಗೆ ಆ ರಾಜಕೀಯ ಹೇಗೆ ಪೂರಕವಾಗಿದೆ ಎಂಬುವುದನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ ಮತ್ತು ಭೂಪ್ರದೇಶದ ಪರಿಸರದಲ್ಲಿ ಯಾವ ರೀತಿಯ ಬದಲಾವಣೆಯಾಗುತ್ತದೆ ಎಂಬುದನ್ನು ತಿಳಿಯಲಾಗಿದೆ.

೪) ಒಂದು ಜಿಲ್ಲೆಯ ಬೆಳವಣಿಗೆಯ ಧೋರಣೆಯಲ್ಲಿ ಅಲ್ಲಿನ ರಾಜಕಾರಣವು ಯಾವ ರೀತಿ ಪ್ರಭಾವ ಬೀರಿದೆ ಎಂಬುದನ್ನು ಅರಿಯುವಂತಾಯಿತು.

೫) ಕೊಡಗಿನಲ್ಲಿ ನಡೆದಿರುವ ಪ್ರತ್ಯೇಕತೆಯ (ಸ್ವಾಯತ್ತತೆಯ) ಹೋರಾಟ,ಸಿ ಎನ್ ಸಿಯ ಇತ್ತೀಚಿನ ಬೇಡಿಕೆ,ಮುಂತಾದವುಗಳನ್ನು ತಿಳಿಯುವ ಪ್ರಯತ್ನವನ್ನು ಮಾಡಲಾಗಿದೆ

೬) ಕೊಡಗಿನ ಅಲ್ಪಸಂಖ್ಯಾತರು ಮತ್ತು ರಾಜಕೀಯ ಪ್ರಾತಿನಿಧ್ಯದ ನಿರೂಪಣೆಗಳನ್ನು ಕಂಡುಕೊಳ್ಳುವ ಉದ್ದೇಶ ಈ ಅಧ್ಯಯನಕ್ಕಿದೆ. ಕಾರಣ ಅತೀ ಸಣ್ಣ ಗುಂಪುಗಳ ರಾಜಕೀಯ ಅಭಿವ್ಯಕ್ತಿ ಹೇಗೆ ಒಟ್ಟು ಸಮಗ್ರ ರಾಜಕಾರಣದ ಮೇಲೆ ಪ್ರಭಾವ ಬೀರಿದೆ ಎಂಬುದನ್ನು ಅಂದಾಜಿಸಲು ಸಹಕಾರಿಯಾಗಿದೆ.

೭) ಸ್ಥಳೀಯ ಬುಡಕಟ್ಟು ಮತ್ತು ರಾಜಕೀಯ ಪ್ರಾತಿನಿಧ್ಯದ ಅಂಶಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

೮) ವಲಸಿಗ ಜನಸಮುದಾಯದ ರಾಜಕೀಯ ಹಿತಾಸಕ್ತಿಗಳನ್ನು ಉದ್ದೇಶವಾಗಿಟ್ಟುಕೊಂಡು ಅಧ್ಯಯನ ನಡೆಸಲಾಗಿದೆ.

೯) ಧಾರ್ಮಿಕ ಜಾತಿಯ ಪ್ರಜ್ಞೆಗಳು ಹೇಗೆ ಕೊಡಗಿನ ರಾಜಕೀಯದ ಆಕಾರ ಪರಿಕರಗಳಾಗಿ ಚಾಲನೆಗೆ ಒಳಪಟ್ಟಿದೆ ಎಂಬುದನ್ನು ಗಮನಿಸಲಾಗಿದೆ.

೧೦) ಸೈದ್ಧಾಂತಿಕ ಆಯಾಮದಿಂದ ಹುಟ್ಟಿಕೊಂಡ ರಾಜಕೀಯ ವಿದ್ಯಾಮಾನಗಳನ್ನು ಗ್ರಹಿಸುವ ಪ್ರಯತ್ನ ಮಾಡಲಾಗಿದೆ.

೧೧) ಚರಿತ್ರೆ, ಮತ್ತು ವರ್ತಮಾನದ ಬಹುದೊಡ್ಡ ರಾಜಕೀಯ ಸ್ವೀಕರಣೆ ಮತ್ತು ನಿರಾಕರಣೆಯನ್ನು ಅಂದಾಜಿಸಲಾಗಿದೆ.

೧೨) ಜನಾದೇಶ, ಜನರ ರಾಜಕೀಯ ಮಾನೋಧೈರ್ಯ, ಇತ್ಯಾದಿಗಳ ಗ್ರಹಿಕೆಗಳನ್ನು ಅಂದಾಜಿಸಲಾಗಿದೆ.

೧೩) ಈ ಅಧ್ಯಯನದ ಮೂಲಂಶವಾದ ೧೯೯೦ರ ನಂತರ, ಜಿಲ್ಲೆಯಲ್ಲಿ ಆಗಿರುವ ರಾಜಕೀಯ ಬದಲಾವಣೆ ಮತ್ತು ಅದರಿಂದ ರಾಜ್ಯರಾಜಕೀಯದ ಮೇಲೆ ಆಗಿರುವ ಪ್ರಭಾವವನ್ನು ಆಳವಾದ ಅಧ್ಯಯನದ ಮುಖಾಂತರ ಪ್ರತಿಬಿಂಬಿಸಿ ಜಿಲ್ಲೆಯ ರಾಜಕೀಯವು ಜನರಿಗೆ ಯಾವ ರೀತಿಯಲ್ಲಿ ಸಹಕಾರಿಯಾಗಿದೆ ಎಂಬುದನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಇದಕ್ಕೆ ಹೊಂದಿಕೊಳ್ಳುವ ಹಾಗೂ ಇಂತಹ ಅಧ್ಯಯನಗಳು ಈಗಾಗಲೇ ನಡೆದಿವೆಯೇ. ನಡೆದಿದ್ದರೆ ಯಾವ ಪ್ರದೇಶದಲ್ಲಿ ನಡೆದಿದೆ, ನಡೆದಿಲ್ಲವಾದಲ್ಲಿ ಈ ಅಧ್ಯಯನ ಹೇಗೆ ಆ ಜಾಗವನ್ನು ತುಂಬಿಕೊಳ್ಳಬಹುದು ಎಂಬ ಅಂಶವನ್ನು ಮನದಟ್ಟು ಮಾಡಿಕೊಳ್ಳಲು ಗ್ರಂಥಗಳ ಪುನರ್ಅಧ್ಯಯನ ಹಾಗೂ ಸಾಹಿತ್ಯ ಸಮೀಕ್ಷೆಯನ್ನು ವಿಮರ್ಶಾತ್ಮಕವಾಗಿ ಮಾಡಲಾಗಿದೆ.

## ಅಧ್ಯಯನದ ಪರಿಮಿತಿಗಳು:–

ಕೊಡಗು ಜಿಲ್ಲೆಯು ಕರ್ನಾಟಕದ ಅತಿ ಚಿಕ್ಕ ಜಿಲ್ಲೆಯಾಗಿದ್ದು, ಪ್ರಾದೇಶಿಕ ವಿಸ್ತೀರ್ಣ, ರಾಜಕೀಯ ಆಯಾಮ ಸಣ್ಣ ಕ್ರಿಯೆಯಾಗಿ ಪರಿಭಾವಿಸಲ್ಪಡುವುದರಿಂದ ಅಧ್ಯಯನದ ಮಿತಿಯಾಗಿ ಗಮನಿಸಬಹುದು.

೧೯೯೦ರಿಂದ ೨೦೧೮ ರ ವಿಧಾನಸಭಾ ಚುನಾವಣೆಯವರೆಗಿನ ರಾಜಕೀಯ ಬೆಳವಣಿಗೆ ಮತ್ತು ಸಮಸ್ಯೆಗಳಿಗೆ ಮಾತ್ರ ಪ್ರಾಮುಖ್ಯತೆ ನೀಡಿರುವುದು ಕೂಡ ವಿಷಯಕ್ಕೆ ಸಂಬಂಧಪಟ್ಟಂತಹ ಎರಡನೆಯ ಮಿತಿಯಾಗಿ ಪರಿಗಣಿಸಬಹುದು. ಈ ಹಿಂದಿನ ಮತ್ತು ಮುಂದಿನ ರಾಜಕೀಯ ವಿಚಾರಗಳ ಅಂತರ ಸಂಬಂಧಗಳನ್ನು ಪರಿಶೀಲಿಸಲು ಸಾಧ್ಯವಾಗದೆ ಇರಬಹುದೆಂಬ ನೆಲೆಯನ್ನು ಕಾಣಬಹುದು.

ಪ್ರಸ್ತಾಪಿತ ಅಧ್ಯಯನಕ್ಕೆ ಸಂಬಂಧಿಸಿದ ಸಾಹಿತ್ಯ ಹಾಗೂ ಆಧಾರ ಸಂಪನ್ಮೂಲಗಳ ಅಭಾವವು, ಮೂರನೆಯ ಮಿತಿಯಾಗಿದೆ. ಕಾರಣ ಕೊಡಗಿನಲ್ಲಿ ಸಾಹಿತ್ಯ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಆಕಾರಗಳನ್ನು, ಬರಹಗಳನ್ನು,ಸಂಶೋಧನೆಯನ್ನು, ಅಧ್ಯಯನವನ್ನು ಕೈಗೊಳ್ಳಲು ಹೆಚ್ಚಿನವರು ಆಸಕ್ತಿ ತೋರಿಸಿದ್ದಾರೆ.ಆದರೆ ರಾಜಕೀಯ ವಿದ್ಯಮಾನದ ಬಗ್ಗೆ ಒಲವು ಸೀಮಿತ ನೆಲೆಯದ್ದಾಗಿದೆ.

ಕರ್ನಾಟಕದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗಿನ ರಾಜಕಾರಣವು ಪ್ರಬಲವಾದ ರಾಜಕೀಯ ನಿಲುವುಗಳನ್ನು ಮುಂದಿಡಲು ಸದಾ ಸೋತಿದೆ. ಮಾತ್ರವಲ್ಲ ಅಭಿವೃದ್ಧಿಯ ಹಾದಿಯಾಗಿ ಈವರೆಗೆ ಅಸ್ಥಿತ್ವಕ್ಕೆ ಬಂದ ಎಲ್ಲಾ ಸರ್ಕಾರಗಳು ಸಹ ಕೊಡಗನ್ನು ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಅರ್ಥಿಕವಾಗಿ ನಿರ್ಲಕ್ಷಿಸಿದೆ. ಈ ನಿರ್ಲಕ್ಷ್ಯವೂ ಸಹ ಅಧ್ಯಯನ ಸಂದರ್ಭದಲ್ಲಿ ಸಂಶೋಧನೆಯ ಬಾಹ್ಯ ಮಿತಿಯಾಗಿ ಗ್ರಹಿಸಲು ಸಾಧ್ಯವಾಗಿದೆ.

ಕೊಡಗಿನ ಸ್ಥಳೀಯ ಜನಪ್ರತಿನಿಧಿಗಳು, ರಾಜ್ಯ ರಾಜಕಾರಣದ ವಕ್ತಾರರು ಕೊಡಗಿನ ಜ್ವಲಂತ ಸಮಸ್ಯೆಗಳನ್ನು ಸಾರ್ವಜನಿಕ ವಲಯದಲ್ಲಾಗಿರಬಹುದು, ವಿಧಾನಸಭೆ, ಲೋಕಸಭೆ ಗಳಲ್ಲಾಗಿರಬಹುದು, ಮಾಧ್ಯಮಗಳಲ್ಲಾಗಿರಬಹುದು ಚರ್ಚಿಸುವ ಪ್ರಯತ್ನವನ್ನ ಮಾಡದಿರುವುದು ಸಹ ಈ ಅಧ್ಯಯನದ ಬಾಹ್ಯ ಮಿತಿಯಾಗಿ ಗಮನಿಸಬಹುದು.

ಕೊಡಗಿನ ಸ್ಥಳೀಯ ಜನಸಮುದಾಯಕ್ಕೆ ಸಕ್ರೀಯ ರಾಜಕಾರಣದ ಬಗ್ಗೆ ಆಸಕ್ತಿಯಾಗಲಿ, ತಮ್ಮ ಸಮಸ್ಯೆ ಮತ್ತು ಬೇಡಿಕೆಗಳಿಗಾಗಿ ರಾಜಕೀಯ ಪ್ರಜ್ಞಾವಂತಿಕೆಯನ್ನು ಮುಂದಿಟ್ಟು ಹೋರಾಟ ಮಾಡುವ ಮನೋಧರ್ಮವಾಗಲಿ ಇಲ್ಲದಿರುವುದು ಸಹ ಒಂದು ಮಿತಿಯಾಗಿ ಗ್ರಹಿಸಬಹುದು.

## ಅಧ್ಯಯನದ ವೈಧಾನಿಕತೆ

ಸಮಸ್ಯೆಯ ಮೂಲಾಧಾರಗಳು ಪ್ರಸ್ತುತ ಅಧ್ಯಯನಕ್ಕೆ ಬೇಕಾದ ಆಧಾರ ಸೂಚಿಗಳನ್ನು ವಿದ್ವಾಂಸರು ಮತ್ತು ಲೇಖಕರು ಪ್ರಕಟಿತ ಮತ್ತು ಅಪ್ರಕಟಿತ ಪುಸ್ತಕಗಳು, ಸಂಶೋಧನಾ ಪ್ರಬಂಧಗಳು, ವರದಿಗಳು, ಕೊಡಗು ಜಿಲ್ಲಾಗೆಜೆಟೆಡ್, ಸಮೀಕ್ಷೆಗಳು, ಪ್ರಾಥಮಿಕ ಮತ್ತು ದ್ವಿತೀಯ ಮೂಲಾಧಾರಗಳಿಂದ ಪಡೆಯಲಾಗಿದೆ. ಹಾಗೇ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳು, ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು, ಪ್ರಯೋಗಾತ್ಮಕ ಅಧ್ಯಯನದ ಮೂಲಕ ಮತು ್ತಹಿರಿಯ ನಾಗರಿಕರು, ರಾಜಕಾರಣಿಗಳು, ಆಡಳಿತಾಧಿಕಾರಿಗಳ ಸಂದರ್ಶನದಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಚಾರಿತ್ರಿಕ ವಿಧಾನ:–**

ಕೊಡಗಿನ ಇತಿಹಾಸಕ್ಕೆ ಸಂಬಂಧಿಸಿದ ಗ್ಯಾಜಟಿಯರ್, ಕಛೇರಿ ದಾಖಲೆಗಳು, ಚರಿತ್ರೆಯನ್ನು ಕಟ್ಟಿಕೊಡುವ ಪುಸ್ತಕಗಳ ಮೂಲಕ ಚಾರಿತ್ರಿಕ ವಿಧಾನವನ್ನು ಅಧ್ಯಯನದ ವಿಧಾನವಾಗಿ ರೂಪಿಸಲಾಗಿದೆ. ಚರಿತ್ರೆಯಲ್ಲಿ ಸಂದುಹೋದ ರಾಜಕೀಯ ಅಂಶಗಳನ್ನು ಕೊಡಗಿನಲ್ಲಿ ಬ್ರಿಟಿಷರ ಕಾಲಘಟ್ಟದಿಂದ ಪ್ರಸ್ತುತ ಸಂದರ್ಭದವರೆಗೂ ನಡೆದ ಚಾರಿತ್ರಿಕ ಸನ್ನಿವೇಶಗಳನ್ನು ಅಧ್ಯಯನದಲ್ಲಿ ಅಳವಡಿಸಲಾಗಿದೆ.

**ಅವಲೋಕನ ವಿಧಾನ:–**

ಕಾಲದಿಂದ ಕಾಲಕ್ಕೆ ಕೊಡಗಿನಲ್ಲಿ ಬದಲಾಗುತ್ತಿರುವ ರಾಜಕೀಯ ಸನ್ನಿವೇಶಗಳನ್ನು ದಾಖಲೆಸಹಿತ ಅವಲೋಕಿಸುವ ಕೆಲಸ ಮಾಡಲಾಗಿದೆ.

**ಸಂದರ್ಶನ ವಿಧಾನ:–**

ಕೊಡಗಿನ ಪತ್ರಕರ್ತರನ್ನು, ರಾಜಕೀಯ ನಾಯಕರನ್ನು, ವಿದ್ವಾಂಸರನ್ನು, ರಾಜಕೀಯ ಚಿಂತಕರನ್ನು ಸಂದರ್ಶನ ಮಾಡಿ ಅವರಿಂದ ಪಡೆದ ಮಾಹಿತಿಗಳ ಆಧಾರದಲ್ಲಿ ಈ ಮಹಾಪ್ರಬಂಧವನ್ನು ರೂಪಿಸಲಾಗಿದೆ.

**ಪ್ರಶ್ನಾವಳಿ ವಿಧಾನ:–**

ಕೆಲವು ರಾಜಕಾರಣಿಗಳಿಗೆ, ಕೆಲವು ವಿದ್ವಾಂಸರಿಗೆ ಗೂಗಲ್ ಡಾಕ್ಯುಮೆಂಟ್ ಮೂಲಕ, ಅಂಚೆ ಮೂಲಕ ಪ್ರಶ್ನಾವಳಿಗಳನ್ನು ಕಳುಹಿಸಿ ಮಾಹಿತಿ ಸಂಗ್ರಹಿಸಲಾಗಿದೆ.

**ವಿವರಣಾತ್ಮಕ ವಿಧಾನ:–**

ವಿವರಗಳನ್ನು ಕಟ್ಟಿಕೊಡುವುದು, ವಿವರಣಾತ್ಮಕವಾಗಿ ಚರ್ಚಿಸುವುದು, ವಾದ,ಸಂವಾದ, ಪ್ರತಿವಾದಗಳನ್ನು ಯೋಜಿಸುವ ಕಾರ್ಯವನ್ನು ಮಾಡಲಾಗಿದೆ.

**ವಿಶ್ಲೇಷಣಾತ್ಮಕ ವಿಧಾನ:–** ಆಕಾರ ಸಂಬಂಧಿ ನಿರೂಪಣೆಗಳನ್ನು ಕೇವಲ ವಿವರಣೆಯ ದೃಷ್ಟಿಯಿಂದ ನೋಡದೆ, ವಿಶ್ಲೇಷಣೆಗೆ ಒಳಪಡಿಸುವ ಕಾರ್ಯವನ್ನು ಮಾಡಲಾಗಿದೆ.

**ವಿಮರ್ಶಾತ್ಮಕ ವಿಧಾನ:–**

ಒಂದು ವಿಚಾರದ ಬಗ್ಗೆ ಯಾವುದೇ ಬಗೆಯ ತೀರ್ಪನ್ನು ನೀಡದೆ, ಪ್ರತಿಯೊಂದು ಅಂಶಗಳನ್ನು,ಉಲ್ಲೇಖಗಳು, ಆಕಾರಗಳನ್ನು, ವಿವರಣೆ, ವಿಶ್ಲೇಷಣೆಗೆ ಒಳಪಡಿಸಿ, ವಿಮರ್ಶಾತ್ಮಕ ರಾಜಕೀಯ ವಿನ್ಯಾಸವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

**ಮಾದರಿ ಆಧಾರಿತ ವಿಧಾನ:–**

ಕರ್ನಾಟಕದ ರಾಜಕಾರಣ ಪ್ರದೇಶವಾರು, ಜಿಲ್ಲಾವಾರು ಭಿನ್ನವಾಗಿದೆ. ಕರ್ನಾಟಕದ ಉಳಿದ ಜಿಲ್ಲೆಗೆ ಹೋಲಿಕೆ ಮಾಡಿದರೆ ಕೊಡಗು ಬಿನ್ನ. ಈ ಭಿನ್ನ ನೆಲೆಯನ್ನು “ಕೊಡಗು ಮಾದರಿ” ಎಂಬ ಕಲ್ಪನೆಯಲ್ಲಿ ಪರಿಭಾವಿಸಿ ಅಧ್ಯಯನ ಮಾಡಲಾಗಿದೆ.

**ತಾಂತ್ರಿಕ ವಿಧಾನ:–**

ತಂತ್ರಜ್ಞಾನ, ಸೋಶಿಯಲ್ ಮೀಡಿಯಾದ ಅಂಶಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸಿ ಸಾಮಾಜಿಕ ಜಾಲತಾಣಗಳಲ್ಲಿ ನಡೆದ ರಾಜಕೀಯ ಚರ್ಚೆಗಳನ್ನು ಅಧ್ಯಯನದ ಕೆಲವು ಕಡೆಗಳಲ್ಲಿ ಬಳಸಿಕೊಳ್ಳಲಾಗಿದೆ.

**ಸೈದ್ಧಾಂತಿಕ ವಿಧಾನ:–**

ರಾಜಕೀಯ ವಾದಗಳನ್ನು ಸೈದಾಂತಿಕ ನಿರ್ವಚನಗಳು, ರಾಷ್ಟ್ರೀಯತೆಯನ್ನು, ಸೌಹಾರ್ದ ಪರಿಕಲ್ಪನೆಗಳನ್ನು,ಪ್ರತ್ಯೇಕತೆಯಂತಹ ಸೈದಾಂತಿಕ ಆಯಾಮಗಳನ್ನು ಈ ಅಧ್ಯಯನದಲ್ಲಿ ಕಾಣಿಸಲಾಗಿದೆ.

**ಮೌಲ್ಯಮಾಪನ ವಿಧಾನ :–**

ವಿಚಾರಗಳನ್ನು ಸಮತೂಕದಿಂದ ನೋಡಬೇಕಾದ, ಪೂರ್ವಗ್ರಹ ಮುಕ್ತವಾದ, ರಾಜಕೀಯ ಏಕಾಭಿವ್ಯಕ್ತಿ ಸಂಶೋಧಕನ ನಿರೂಪಣೆಗಳಿಂದ ಕಳಚಿಕೊಳ್ಳಬೇಕಾದ ಅನಿವಾರ್ಯತೆ ಈ ಅಧ್ಯಯನಕ್ಕೆ ಇರುವುದರಿಂದ ಪ್ರತಿಯೊಂದು ಅಂಶಗಳನ್ನು ಮೌಲ್ಯಮಾಪನ ಪ್ರಕ್ರಿಯೆಗೆ ಒಳಪಡಿಸಲಾಗಿದೆ.

**ತಾತ್ವೀಕೀಕರಣ ವಿಧಾನ:–**

ತಾತ್ವಿಕತೆ ಸಂಶೋಧನೆಯ ಜೀವಾಳ ಸಂಶೋಧನೆಯು ಅಂತಿಮವಾಗಿ ತನ್ನ ಒಡಲಿನಲ್ಲಿ ಕೇಂದ್ರೀಕರಿಸಿ ಹೇಳಬೇಕಾದ ಅಂಶವು ತಾತ್ವಿಕವಾಗಿರಲೇ ಬೇಕಾಗುತ್ತದೆ. ಫಲಿತಗಳನ್ನು ಕಂಡುಕೊಳ್ಳುವಾಗ ಫಲಿತಗಳ ಮೇಲಿನ ಶಕ್ತವಾದ ಕಂಡುಕೊಳ್ಳುವಿಕೆ,ಅಥವಾ ಹೊಸ ನೋಟವು ತಾತ್ವಿಕತೆಯನ್ನು ಕೇಂದ್ರೀಕರಿಸುವ ಪ್ರಯತ್ನ ಮಾಡಿದೆ.

**ವೈಜ್ಞಾನಿಕ ಮತ್ತು ವೈಚಾರಿಕ ವಿಧಾನ:–**

ರಾಜಕೀಯ ಪ್ರವೃತ್ತಿ ಒಂದು ವೈಜ್ಞಾನಿಕ ಮತ್ತು ವೈಚಾರಿಕ ಧೋರಣೆಯಾಗಿದೆ. ಆದ್ದರಿಂದ ಅಧ್ಯಯನದೊಳಗೆ ವೈಜ್ಞಾನಿಕ ಮತ್ತು ವೈಚಾರಿಕ ತಳಹದಿಯ ಅಂಶಗಳನ್ನು ವೈದಾನಿಕತೆಯಾಗಿ ಬಳಸಿಕೊಳ್ಳಲಾಗಿದೆ.

## ಅಧ್ಯಯನದ ಯೋಜನೆಗಳು ಅಥವಾ ಅಧ್ಯಯನದ (ಸಮಗ್ರ ಚಿತ್ರಣ) ರೂಪುರೇಶೆ.

ಪ್ರಸ್ತಾಪಿತ ಅಧ್ಯಯನದಲ್ಲಿ ಐದು ಅಧ್ಯಾಯಗಳನ್ನು ರೂಪಿಸಲಾಗಿದೆ. ಈ ಐದು ಅಧ್ಯಾಯಗಳು ವಿವಿಧ ದೃಷ್ಟಿಕೋನದಿಂದ ಹೊರಟು ಕೇಂದ್ರೀಕೃತ ನೆಲೆಯಲ್ಲಿ ಕೊಡಗಿನ ರಾಜಕೀಯದ ಸಮಗ್ರ ಒಳನೋಟಗಳನ್ನು ಮುಂದಿಡುವ ಪ್ರಯತ್ನವನ್ನು ಮಾಡಿದೆ.ಆ ಮೂಲಕ ಕೊಡಗಿನ ರಾಜಕೀಯ,ಇಲ್ಲಿನ

ರಾಜಕೀಯವನ್ನು ಪ್ರಭಾವಿಸಿದ ಮೂಲಾಂಶಗಳನ್ನು, ಕೊಡಗಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಮಗ್ರ ನೆಲೆಯಲ್ಲಿ ಸಂಭವಿಸಿದ ವಿವರಗಳನ್ನು ಸಮಷ್ಟಿಯಾಗಿ ಕ್ರೋಢೀಕರಿಸುವ ಪ್ರಯತ್ನವನ್ನು ಈ ಅಧ್ಯಯನವು ಒಟ್ಟಂದದಲ್ಲಿ ಚರ್ಚಿಸುವ, ಅವಲೋಕಿಸುವ, ವಿಶ್ಲೇಷಿಸುವ, ವಿಮರ್ಶಿಸುವ, ಮೌಲ್ಯಮಾಪನಕ್ಕೆ ಒಳಪಡಿಸುವ, ತಾತ್ತ್ವೀಕರಿಸುವ ಮೂಲಕ ಸೈದ್ಧಾಂತಿಕ ಆಯಾಮವನ್ನು ಪ್ರಾಪ್ತಿಗೊಳಿಸುವ ಪ್ರಯತ್ನವನ್ನು ಪ್ರಜ್ಞಾಪೂರ್ವಕ ನಿರ್ವಹಿಸಲಾಗಿದೆ.

## ಅಧ್ಯಾಯ–೧

ಅಧ್ಯಾಯ ಒಂದರಲ್ಲಿ ಪ್ರಸ್ತಾವನೆಯ ಮೂಲಕ ಸಂಶೋಧನೆಯ ಕುರಿತ ಪ್ರಸ್ತಾವಿಕ ನುಡಿಗಳನ್ನು ಮುಂದಿಡುವ ಪ್ರಯತ್ನವನ್ನು ಮಾಡಲಾಗಿದೆ. ಸಂಶೋಧನಾ ಸಮಸ್ಯೆಯ ಪ್ರಸ್ತಾಪ, ಸಂಶೋಧನೆಗೆ ಸಂಬಂಧಿಸಿದ ಸಾಹಿತ್ಯ ಪರಾಮರ್ಶೆ, ಸಂಶೋಧನಾ ಅಧ್ಯಯನದ ವ್ಯಾಪ್ತಿ, ಸಂಶೋಧನೆಯ ಉದ್ದೇಶಗಳು, ಪ್ರಾಕಲ್ಪನೆಯ ನಿರೂಪಣೆಗಳು, ಸಂಶೋಧನಾ ವೈಧಾನಿಕತೆ ಹಾಗೂ ಅಧ್ಯಾಯದ ಯೋಜನೆಗಳನ್ನು ಈ ಅಧ್ಯಾಯದಲ್ಲಿ ಸ್ಪಷ್ಟವಾಗಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಆ ಮೂಲಕ ಸಂಶೋಧನೆಗೆ ತಾತ್ತ್ವಿಕ ಚೌಕಟನ್ನು ರೂಪಿಸಿ ಸ್ಪಷ್ಟ ರಹದಾರಿಯೊಂದನ್ನು ಕಾಣಿಸಲಾಗಿದೆ.

## ಅಧ್ಯಾಯ–೨

ಅಧ್ಯಾಯ–ಎರಡರಲ್ಲಿ ಕೊಡಗಿನ ರಾಜಕೀಯ ಹಿನ್ನಲೆ:–ಒಂದುನೋಟ ಎಂಬ ಬಹುಮುಖ್ಯವಾದ ನೆಲೆಗಟ್ಟನ್ನು ಶೋಧಿಸುವ ಕಾರ್ಯ ಮಾಡಲಾಗಿದೆ. ಈ ಅಧ್ಯಾಯವು ಚಾರಿತ್ರಿಕ ವಿಚಾರಗಳನ್ನು ವಿವರಿಸುವ ಪ್ರಯತ್ನವನ್ನು ಮಾಡಿದೆ. ಕೊಡಗಿನ ಇತಿಹಾಸವನ್ನು ಕೊಡಗಿನ ರಾಜಕೀಯ ಕಥನಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಸಿ ರಾಜ್ಯವಾಗಿ ಕೊಡಗು ಹೇಗೆ ತನ್ನ ಆಡಳಿತವನ್ನು ರೂಪಿಸಿಕೊಂಡಿತು, ಮಾತ್ರವಲ್ಲ ಮೈಸೂರು ರಾಜ್ಯದೊಂದಿಗೆ ವಿಲೀನ (ಏಕೀಕರಣ) ಪ್ರಕ್ರಿಯೆ ಹೇಗೆ ನಡೆಯಿತು, ಆ ಮೂಲಕ ಕೊಡಗಿನಲ್ಲಿ ರಾಜಕೀಯದ ಪರಿವರ್ತನಾಶೀಲ ಪ್ರಕ್ರಿಯೆಗಳು ಹೇಗೆ ಚಾಲ್ತಿಗೆ ಬಂದಿತು ಎಂಬ ಅಂಶವನ್ನು ಕೂಲಂಕಶವಾಗಿ ಚರ್ಚಿಸಲಾಗಿದೆ. ಮುಂದುವರೆದ ರಾಜಕೀಯ ನಡಾವಳಿಗಳ ಮೂಲಕ ೧೯೯೦ ರ ತನಕ ಕೊಡಗಿನ ರಾಜಕೀಯ ಬೆಳವಣಿಗೆ ಹೇಗೆ ಸಂಭವಿಸಿತು ಎಂಬ ಚಿತ್ರಣವನ್ನು ಈ ಅಧ್ಯಾಯವು ಸಮಗ್ರತೆಯ ಆಧಾರದಲ್ಲಿ ಚರ್ಚಿಸುವ ಪ್ರಯತ್ನ ಮಾಡಿದೆ. ಈ ಅಧ್ಯಾಯವು ರಾಜಕೀಯದ ಚಾರಿತ್ರಿಕ ಮಾದರಿಯನ್ನು ತನ್ನ ವೈಧಾನಿಕತೆಯಾಗಿಯೂ, ಚರಿತ್ರೆ ಮತ್ತು ಐತಿಹಾಸಿಕ ದಾಖಲೆಗಳನ್ನು ಈ ಅಧ್ಯಾಯದ ಆಕರ ಮತ್ತು ಪರಿಕರವಾಗಿ ದುಡಿಸಿಕೊಂಡಿದೆ.

## ಅಧ್ಯಾಯ–೩

ಅಧ್ಯಾಯ ಮೂರರಲ್ಲಿ ೧೯೯೦ರ ನಂತರ ಜಿಲ್ಲೆಯಲ್ಲಾದ ರಾಜಕೀಯ ಪ್ರವೃತಿ ಬಗೆಗಿನ ಸಮಗ್ರ ಚಿತ್ರಣವನ್ನು ಪ್ರಜಾಪ್ರಭುತ್ವವಾದ ತಾತ್ತ್ವಿಕ ಆಯಾಮದ ಮೂಲಕ ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ. ೧೯೯೧ರ ನಂತರ ಕೊಡಗು ಜಿಲ್ಲೆಯಲ್ಲಾದ ರಾಜಕೀಯ ಬದಲಾವಣೆಗಳನ್ನು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ. ಕೊಡಗಿನ ರಾಜಕಾರಣ ಬಲಪಂಥೀಯ ರಾಜಕಾರಣದ ಕಡೆಗೆ ಚಲಿಸಿದ ಚಾರಿತ್ರಿಕ ಸನ್ನಿವೇಶವನ್ನು,ಸ್ಥಳೀಯ ನಾಯಕತ್ವದ ಕೊರತೆ ಹಾಗೂ ಪರಕೀಯ ನಾಯಕರ ಪ್ರಾಬಲ್ಯದ ಆಯಾಮಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ.

ಕೊಡಗು ಜಿಲ್ಲೆ ಕ್ಷೇತ್ರಪುನರ್ ವಿಂಗಡನೆಯ ನಂತರದ ಚುನಾವಣೆನಂತರ ಎದುರಿಸಿದ ಚುನಾವಣಾ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಅವಲೋಕಿಸುವ, ಪರಾಮರ್ಶಗೆ ಒಳಪಡಿಸುವ ಕೆಲಸವನ್ನು ಮಾಡಲಾಗಿದೆ.ಈ ಅಧ್ಯಾಯಕ್ಕೆ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶ, ಚುನಾವಣಾ ಆಯೋಗದ ವರದಿಗಳು, ಪತ್ರಿಕಾವರದಿಗಳು  ಆಕರ ಪರಿಕರವಾಗಿ ಬಳಸಿಕೊಳ್ಳಲಾಗಿದೆ. ಈ ಅಂಕಿ ಅಂಶಗಳನ್ನು ವಿಶ್ಲೇಷಣೆ ಎಂಬ ವೈಧಾನಿಕತೆಗೆ ಒಳಪಡಿಸಿ ವೈಜ್ಞಾನಿಕ ತಳಹದಿಯಲ್ಲಿ ವಿವರಿಸಲಾಗಿದೆ.

## ಅಧ್ಯಾಯ–೪

ಅಧ್ಯಾಯ ನಾಲ್ಕರಲ್ಲಿ ಕೊಡಗಿನ ರಾಜಕೀಯದಲ್ಲಿ ೧೯೯೦ರ ನಂತರದ ವಿವಾದಾಂಶಗಳ ಒಂದು ಅಧ್ಯಯನ ಎಂಬ ಈ ಮಹಾಪ್ರಬಂಧದ ಹೃದಯ ಎಂಬ ರೀತಿಯಲ್ಲಿರುವ ವಿಷಯಾಂಶಗಳ ಕಡೆಗೆ ಚರ್ಚೆಯನ್ನು ಕೊಂಡುಹೋಗಲಾಗಿದೆ. ಕೊಡಗಿನ ರಾಜಕೀಯ ಅಸ್ಮಿತೆಗೆ ಮತ್ತಷ್ಟು ಪುಷ್ಟಿ ನೀಡುವ ಕೊಡಗು ಜಿಲ್ಲೆಯ ಮೂಲ ನಿವಾಸಿಗಳು ಎಂದು ವಾದಿಸುವವರು ಮುಂದಿಡುವ ಪ್ರತ್ಯೇಕತಾ ಹೋರಾಟವಾಗಿರಬಹುದು, ಕೇರಳ ಮತ್ತು ದಕ್ಷಿಣ ಕನ್ನಡದ ಪ್ರದೇಶಗಳ ವಲಸಿಗರಿಂದ ಕೊಡಗಿನ ರಾಜಕಾರಣದ ಮೇಲೆ ಬೀರಿದ ಪ್ರಭಾವವನ್ನು ಈ ಭಾಗದಲ್ಲಿ ವಿಷಯಾಧಾರಿತವಾಗಿ ಚರ್ಚಿಸಲಾಗಿದೆ. ಮಾತ್ರವಲ್ಲ ಪ್ರಾದೇಶಿಕ ಮತ ಕ್ಷೇತ್ರಗಳ ವಿಂಗಡನೆಯಿಂದ ರಾಜಕೀಯದ ಮೇಲೆ ಬೀರಿದ ಪ್ರಭಾವವೇನು? ಜಮ್ಮಬಾಣೆ,ಎಸ್ ಟಿ ಟ್ಯಾಗ್, ಕೋವಿಹಕ್ಕಿನಂತಹ ಸಾಂಸ್ಕೃತಿಕ ಅಂಶಗಳನ್ನು ಮುಖ್ಯವಾಯಿನಿಗೆ ತಂದು ಹೇಗೆ ರಾಜಕೀಯ ಬಲವರ್ಧನೆಗೆ ಬಳಸಿಕೊಳ್ಳಲಾಗಿದೆ ಎಂಬುದನ್ನು ಐತಿಹಾಸಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಕಲ್ಪನೆಯ ಆಧಾರದಲ್ಲಿ ಕಂಡುಕೊಳ್ಳುವ ಉಮೇದನ್ನು ಇಲ್ಲಿ ಪ್ರಯತ್ನಿಸಲಾಗಿದೆ.

ಕೊನೆಯ ಭಾಗದಲ್ಲಿ ಈ ಮೇಲಿನ ಪರಿಕಲ್ಪನೆ ಮತ್ತು ಕಾರ್ಯಕಾರಣ ಸಂಬಂಧವನ್ನು ಸಂದರ್ಭಾನುಸಾರವಾಗಿ ಅವಲೋಕಿಸಿ ಅವುಗಳ ಪರಿಣಾಮದ ಹಿನ್ನೆಲೆಯಿಂದ ಹುಟ್ಟಿಕೊಂಡ ಅಭಿವೃದ್ಧಿ ರಾಜಕಾರಣದ ಬಹುಸ್ತರಗಳನ್ನು ಪರ ವಿರೋಧದ ನೆಲೆಯಲ್ಲಿ ಅನ್ವೇಷಿಸುವ ಕಾರ್ಯವನ್ನು ಮಾಡಲಾಗಿದೆ.

## ಅಧ್ಯಾಯ–೫

ಅಧ್ಯಾಯ ಐದರಲ್ಲಿ ಸಮಗ್ರ ಅಧ್ಯಯನದ ಸತ್ವವನ್ನು ಗ್ರಹಿಸಿಕೊಂಡು ಸಮಾರೋಪವನ್ನು ತಾತ್ತ್ವಿಕವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಒಟ್ಟು ಸಂಶೋಧನೆಯ ಮೂಲಕ ನಾನು ಗ್ರಹಿಸಿಕೊಂಡ ಸತ್ಯ ಮತ್ತು ಸಮನ್ವಯತೆಯ ಫಲಿತಗಳನ್ನು ಸಾಧ್ಯತಃ ಪಟ್ಟಿ ಮಾಡುವ ಪ್ರಯತ್ನವನ್ನು ಮಾಡಲಾಗಿದೆ.

ಆಧುನಿಕ ಕೊಡಗಿನ ರಾಜಕೀಯ ಹಿನ್ನಲೆ, ಪ್ರವೃತ್ತಿ ಹಾಗೂ ವಿವಾದಾಂಶಗಳ ಕುರಿತು ಈ ಸಂಶೋಧನೆಯು ರಾಜಕೀಯವಾಗಿ ಮಹತ್ವದ ಆಯಾಮವನ್ನು ಶೋಧಿಸುವ ಪ್ರಯತ್ನ ಮಾಡಿದೆ. ಈ ಹಿನ್ನೆಲೆಯಿಂದ ಪ್ರಸ್ತುತ ರೂಪುಗೊಂಡ ನಾಲ್ಕು ಅಧ್ಯಾಯಗಳಲ್ಲಿ ವಿಶೇಷವಾಗಿ ಗಮನ ಸೆಳೆದ ಪ್ರಮುಖ ಅಂಶಗಳನ್ನು ಗುರುತಿಸಿ ಪ್ರಸ್ತುತ ಸಮಾರೋಪ ಭಾಗದಲ್ಲಿ ಪರಿಶೀಲಿಸುವ, ವಿಮರ್ಶಿಸುವ, ಅವಲೋಕಿಸುವ ಮೂಲಕ ಫಲಿತಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

## ಫಲಿತಗಳು

ಈ ಸಂಶೋಧನಾತ್ಮಕ ಅಧ್ಯಯನವು ಕೆಲವು ಸಮಸ್ಯೆಗಳನ್ನು ಎದುರಿಸಿದೆ. ಪೂರ್ಣ ನಿರೂಪಣೆಗೆ ತೆರೆದುಕೊಳ್ಳದೆ, ಮಾಹಿತಿಗಳ ಕೊರತೆಗೆ ಸಿಲುಕಿ ಸಮಸ್ಯಾತ್ಮಕ ವಿನ್ಯಾಸವನ್ನು ಅನುಭವಿಸಿದೆ. ಆದರೆ ಕೊಡಗಿನಲ್ಲಿ ಇರುವ ಪ್ರಮುಖ ರಾಜಕೀಯ ಚಿಂತಕರ, ಪತ್ರಕರ್ತರ, ವಿದ್ವಾಂಸರ ಸಂಶೋಧಕರ ಸಂದರ್ಶನವನ್ನು ಕ್ಷೇತ್ರಕಾರ್ಯದ ನೆಲೆಯಲ್ಲಿ ಮಾಡಿ ಈ ಅಧ್ಯಯನಕ್ಕೊಂದು ವಸ್ತುನಿಷ್ಠವಾದ ರೂಪವನ್ನು ಯೋಜಿಸುವ ಪ್ರಯತ್ನವನ್ನು ಮಾಡಲಾಗಿದೆ. ಕ್ಷೇತ್ರ ಕಾರ್ಯದ ಮೂಲಕ ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವುದರೊಂದಿಗೆ ಈ ಸಂಶೋಧನೆಯನ್ನು ನಿರ್ದಿಷ್ಟವಾದ ಸೈದಾಂತಿಕ ಚೌಕಟ್ಟಿನೊಳಗೆ ಅಡಕಗೊಳಿಸುವ ಕೆಲಸವನ್ನು ಮಾಡಲಾಗಿದೆ.

ನಾಲ್ಕು ಅಧ್ಯಾಯಗಳು ನಾಲ್ಕು ಬಗೆಯ ಆಯಾಮಗಳನ್ನು, ರಾಜಕೀಯ 'ಚಿಂತನಾಧಾರೆಯನ್ನು, ಸೈದ್ಧಾಂತಿಕ ತರ್ಕವನ್ನು, ಸಾಂಸ್ಕೃತಿಕ ಪಲ್ಲಟಗಳನ್ನು, ಸಾಮಾಜಿಕವಾದ ಸಂರಚನೆಯನ್ನು ವಿಶದವಾಗಿ ಅಧ್ಯಯನಕ್ಕೆ ಒಳಪಡಿಸಲು ಸಾಧ್ಯತಃ ಶ್ರಮಿಸಲಾಗಿದೆ. ಈ ಹಿನ್ನೆಲೆಯಿಂದ ಇಡೀ ಅಧ್ಯಯನದ ಫಲಿತಗಳನ್ನು ಈ ಕೆಳಕಂಡಂತೆ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಕೊಡಗು ಜಿಲ್ಲೆಯಲ್ಲಿನ ಸಮಗ್ರ ರಾಜಕೀಯ ಚಟುವಟಿಕೆಗಳು ಹಾಗೂ ಇಲ್ಲಿ ನಡೆದ ಕೆಲವು ವಿವಾದಿತ ಅಂಶಗಳು ಅದರ ಚರ್ಚೆಗಳು ಮತ್ತು ಜಿಲ್ಲೆಯ ರಾಜಕೀಯ ಯಾವ ಕಡೆಗೆ ಒಲವು ನೀಡಿವೆ ಎಂಬ ಬಗ್ಗೆ ಹೆಚ್ಚು ಗಮನಹರಿಸಲಾಗಿದೆ. ಕೊಡಗು ಜಿಲ್ಲೆಯಲ್ಲಿ ೧೯೯೦ರ ನಂತರದ ರಾಜಕೀಯ ಚಟುವಟಿಕೆಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಒಂದು ಕಾಲದಲ್ಲಿ ಜಿಲ್ಲೆಯಲ್ಲಿ ಪ್ರಬಲವಾಗಿದ್ದ ಕಾಂಗ್ರೆಸ್ ಪಕ್ಷ ಹೇಗೆ ತನ್ನ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಾ ಬಂತು ಎಂಬುದನ್ನು ವಿವರಿಸುವ ಮೂಲಕ ರಾಜಕೀಯ ಪಲ್ಲಟದ ಮೂಲ ನಿರೂಪಣೆಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಮಾತ್ರವಲ್ಲ ಭಾರತೀಯ ಜನತಾಪಕ್ಷದ ಪ್ರಾಬಲ್ಯಕ್ಕೆ ಕಾರಣವನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ. ಆ ಮೂಲಕ ಬದಲಾದ ರಾಜಕೀಯ ಪ್ರವೃತ್ತಿಗಳನ್ನು ಕಾರ್ಯಕಾರಣ ಸಂಬಂಧದ ವಿನ್ಯಾಸದಲ್ಲಿ ಕಂಡುಕೊಳ್ಳಲಾಗಿದೆ.

ಭಾರತ ಸ್ವತಂತ್ರವಾದ ನಂತರ ಕೊಡಗು ಪ್ರತ್ಯೇಕ ಸಿ ರಾಜ್ಯವಾಗಿ ಕಾರ್ಯನಿರ್ವಹಿಸಿ ನಂತರ ೧೯೫೬ರಲ್ಲಿ ರಾಜ್ಯ ಪುನರ್ ವಿಂಗಡಣೆ ಆದಂತಹ ಸಂದರ್ಭದಲ್ಲಿ ಮೈಸೂರು ರಾಜ್ಯದಲ್ಲಿ ವಿಲೀನಗೊಂಡು ಅದರ ಒಂದು ಭಾಗವಾಯಿತು. ಆನಂತರದಲ್ಲಿಯಾದ ಕೊಡಗು ಜಿಲ್ಲೆಯ ಪ್ರಮುಖ ಸಮಸ್ಯೆಗಳು ಮತ್ತು ಬದಲಾವಣೆಗಳನ್ನು ಕೂಡ ಪ್ರಾರಂಭದಲ್ಲಿ ಚರ್ಚಿಸಲಾಗಿದೆ. ಕೊಡಗು ಸಿ ರಾಜ್ಯವಾಗಿದ್ದಾಗ ಆದಂತಹ ಅಭಿವೃದ್ಧಿ ಮತ್ತು ವಿಲೀನದ ನಂತರದ ಅಭಿವೃದ್ಧಿಯ ಚರ್ಚೆಗಳನ್ನು ಮುಂದಿಡುವ ಪ್ರಯತ್ನದೊಂದಿಗೆ ತೊಂಬತ್ತರ ದಶಕದ ನಂತರದ ಪ್ರತ್ಯೇಕತಾ ಹೋರಾಟಕ್ಕೆ ಈ ಚರ್ಚೆಗಳು ಕಾರಣವಾಗಿರುವುದನ್ನು ಈ ಅಧ್ಯಾಯನವು ಮುನ್ನಲೆಗೆ ತಂದಿವೆ.

ಸಿ ರಾಜ್ಯವಾದ ಕೊಡಗು ಹೊಸ ಸರ್ಕಾರ ಹೊಸ ಭರವಸೆಗಳೊಂದಿಗೆ ಅಭಿವೃದ್ಧಿಯ ಮಾದರಿಯೊಂದನ್ನು ಮುಂದಿಟ್ಟಿತ್ತು ಎಂಬ ಚರ್ಚೆಗಳನ್ನು ವಿಷಧೀಕರಿಸಲಾಯಿತು.

ಕೊಡಗು ಸಿ ರಾಜ್ಯದ ಮುಖ್ಯಮಂತ್ರಿ ಆಗಿದ್ದ ಸಿಎಂ ಪೂಣಚ್ಚ ಓರ್ವ ಮುತ್ಸದಿ ರಾಜಕಾರಣಿಯಾಗಿ ಕೊಡಗಿನ ರಾಜಕೀಯ ಇತಿಹಾಸದಲ್ಲಿ ಕಂಗೊಳಿಸಿರುವುದನ್ನು ಗುರುತಿಸಲು ಸಾಧ್ಯವಾಯಿತು.
ಜಿಲ್ಲೆಯ ಕಾಂಗ್ರೆಸ್ ಪಕ್ಷದ ಉನ್ನತಿ ಮತ್ತು ಭದ್ರಬುನಾದಿಗೆ ಶ್ರಮಿಸಿದ ಮುಂಚೂಣಿ ನಾಯಕರಲ್ಲಿ ಸಿಎಂ ಪೂಣಚ್ಚ ಮೊದಲಿಗರು.

ಕೊಡಗು ಪ್ರತ್ಯೇಕ ರಾಜ್ಯವಾಗಿ ಉಳಿಯಬೇಕು ಎಂಬ ನಿಲುವು ತಾಳಿದ ಕೆಲವು ರಾಜಕಾರಣಿಗಳು ಚುನಾವಣಾ ರಾಜಕಾರಣದ ಮೂಲಕ ಸಿ ಎಂ ಪೂಣಚ್ಚ ಅವರ ವಿಲೀನದ ಕುರಿತು ನಿಲುವನ್ನು ಎದುರಿಸಲು ಪ್ರಯತ್ನಿಸಿದರು. ಆದರೆ ಜನದೇಶ ಮಾತ್ರ ಪೂಣಚ್ಚ ಅವರ ಪರವಾಗಿತ್ತು. ಆ ಮೂಲಕ ನಾವು ಕಂಡುಕೊಳ್ಳಬೇಕಾದ ಅಂಶವೆಂದರೆ ಪ್ರತ್ಯೇಕ ರಾಜ್ಯವಾಗಿ ಕೊಡಗು ಉಳಿಯಬೇಕು ಎಂಬ ನಿರೂಪಣೆ ಬಹುಜನರಲ್ಲಿ ಇರಲಿಲ್ಲ ಎಂಬುವುದು.

೧೯೫೧-೫೨ ರ ಚುನಾವಣಾ ಫಲಿತಾಂಶ ಅವಲೋಕಿಸುವಾಗ ಎರಡು ಅಂಶಗಳು ಸ್ಪಷ್ಟವಾಗುತ್ತದೆ. ಒಂದು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಪ್ರಾಬಲ್ಯ ಕೊಡಗಿನಲ್ಲಿ ವಿಲೀನದ ವಿರುದ್ಧದ ಅಲೆಯನ್ನು ಮೀರಿ ಬೆಳೆದಿತ್ತು. ಎರಡು, ಬಹು ಜನರಿಗೆ ಮೈಸೂರಿನೊಂದಿಗೆ ಕೊಡಗು ಸೇರುವ ಬಗ್ಗೆ ಯಾವುದೇ ನಿರ್ದಿಷ್ಟ ಧೋರಣೆಗಳು ಇರಲಿಲ್ಲ ಅಥವಾ ವಿಲೀನದ ಕುರಿತ ಪರ-ವಿರೋಧ ಚರ್ಚೆಗಳು ಇಲ್ಲಿನ ಸಾಮಾನ್ಯ ಜನರಿಗೆ ಒಂದು ರಾಜಕೀಯ ಚರ್ಚೆಯಾಗಿ ಗ್ರಹಿಕೆಗೆ ನಿಲುಕಲು ಸಾಧ್ಯ ಆಗಲಿಲ್ಲವೇನೊ ಎಂದನಿಸುತ್ತದೆ.ಅಥವಾ ಸಾರ್ವಜನಿಕ ರಂಗದಲ್ಲಿ ಕೊಡಗಿನ ವಿಲೀನದ ಕುರಿತು ಸ್ಪಷ್ಟ ಚರ್ಚೆಯೇ ನಡೆದಿಲ್ಲ ಎಂಬುದನ್ನು ಅಂದಾಜಿಸಬಹುದು.

೧೯೫೬ರಲ್ಲಿ ಕೊಡಗು ವಿಧಾನಸಭೆಯಲ್ಲಿ ನಡೆದ ಕೊಡಗು-ಮೈಸೂರಿನ ಜೊತೆಗಿನ ವಿಲೀನಕ್ಕೆ ಸಂಬಂಧಿಸಿದ ಕಾಯಿದೆಯನ್ನು ರೂಪಿಸಿದಾಗ ಕೊಡಗು ವಿಧಾನಸಭೆಗೆ ಆಯ್ಕೆಯಾಗಿದ್ದ ೨೪ ಮಂದಿ ಶಾಸಕರಲ್ಲಿ ೨೨ ಮಂದಿ ಶಾಸಕರು ಕಾಯ್ದೆಯ ಪರವಾಗಿ ಮತ ಚಲಾಯಿಸಿ, ಕೊಡಗನ್ನು ಮೈಸೂರಿನ ಜೊತೆ ಸೇರಿಸುವ ಬಗ್ಗೆ ತಮ್ಮ ಒಪ್ಪಿತ ನಿಲುವನ್ನು ಮುಂದಿಟ್ಟರು.ಆ ಮೂಲಕ ಕೊಡಗು ವಿಲೀನವನ್ನು ರಾಜಕೀಯ ಅಸ್ತ್ರವಾಗಿ ವಿರೋಧಿ ನಲೆಯಿಂದ ಗೆದ್ದ ೯ ಮಂದಿ ಶಾಸಕರಲ್ಲಿ ಏಳು ಮಂದಿ ಶಾಸಕರು ತಮ್ಮ ನಿಲುವು ಬದಲಾಯಿಸಿದರು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

ವಿಲೀನದ ನಂತರ ಕೊಡಗಿನಲ್ಲಿ ಪ್ರಜಾಸೋಷಿಯಲಿಸ್ಟ್ ಪಕ್ಷ ಹಾಗೂ ಸಿ.ಪಿ.ಐ.ಎಂ ಎಂಬ ಎರಡು ಎಡಪಂಥೀಯ ಚಿಂತನಾಧಾರೆಯ ಪಕ್ಷಗಳು ರಾಷ್ಟ್ರೀಯ ಕಾಂಗ್ರೆಸ್‌ನ ಪ್ರತಿಸ್ಪರ್ಧಿಗಳಾಗಿ ಕೊಡಗಿನ ರಾಜಕೀಯದಲ್ಲಿ ಸಕ್ರಿಯವಾದದ್ದನ್ನು ಗಮನಿಸಬಹುದು.

೧೯೬೭ ರಲ್ಲಿ ಕೊಡಗಿನ ಕ್ಷೇತ್ರಗಳು ಪುನರ್‌ವಿಂಗಡನೆಗೆ ಒಳಪಟ್ಟಾಗ ಸೋಮವಾರಪೇಟೆ ಕ್ಷೇತ್ರ ಹೊಸದಾಗಿ ಸೇರ್ಪಡೆಗೊಂಡು, ಮೂರು ಕ್ಷೇತ್ರವಾಗಿ ರೂಪುಗೊಂಡಿತು. ಅದುವರೆಗೂ ಕೊಡಗಿನಲ್ಲಿ ಎರಡು ಕ್ಷೇತ್ರಗಳು ಮಾತ್ರ ಇದ್ದವು. ವಿರಾಜಪೇಟೆ ಕ್ಷೇತ್ರ  ಎಸ್.ಟಿ ಮೀಸಲು ಕ್ಷೇತ್ರವಾಯಿತು. ೧೯೬೭ ರಲ್ಲಿ ನಡೆದ ಚುನಾವಣೆಯಲ್ಲಿ ವಿರಾಜಪೇಟೆ ಎಸ್ ಟಿ ಮೀಸಲು ಕ್ಷೇತ್ರ ಹಾಗೂ ಹೊಸ ಕ್ಷೇತ್ರವಾದ ಸೋಮವಾರಪೇಟೆಯಲ್ಲಿ ಮೊದಲ ಬಾರಿಗೆ ಕಾಂಗ್ರೆಸೇತರ ಪಕ್ಷಗಳು ಜಯ ಸಾಧಿಸಿದವು.

ವಿರಾಜಪೇಟೆ ಕ್ಷೇತ್ರದಿಂದ ಜನಸಂಘದ ಎನ್.ಎಲ್ ನೈಕ್ ಅವರು ವಿಜಯ ಸಾಧಿಸುತ್ತಾರೆ. ಎ.ಕೆ ಸುಬ್ಬಯ್ಯ ಅವರಂತಹ ಸಂಘ ಪರಿವಾರದ ಮುತ್ಸದಿಯು ಆ ಕಾಲದಲ್ಲಿ ರೂಪಿಸಿದ ತಳಮಟ್ಟದ ರಾಜಕೀಯ ಪ್ರಕ್ರಿಯೆಯ ಫಲಿತಾಂಶ ಇದಾಗಿತ್ತು. ಗಮನಿಸಬೇಕಾದ ಅಂಶವೆಂದರೆ ಮೀಸಲು ಕ್ಷೇತ್ರ ಆಗುವ ಮೊದಲು ಪ್ರಬಲ ಜಾತಿಗಳೇ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಗೆಲುವು ಸಾಧಿಸುತ್ತಿದ್ದವು. ಯಾವಾಗ ಜನಸಂಘ ತಳಮಟ್ಟದಿಂದಲೇ ರಾಜಕಾರಣ ರೂಪಿಸಿತೋ ಆಗಲೇ ವಿರಾಜಪೇಟೆಯಲ್ಲಿ ತನ್ನ ಗೆಲುವನ್ನು ಸಾಧಿಸಲು ಯಶಸ್ವಿಯಾಯಿತು.

ಅದೇ ರೀತಿ ಸೋಮವಾರಪೇಟೆ ಕ್ಷೇತ್ರದಲ್ಲಿ ಪಕ್ಷೇತರರಾದ ಜಿ ಎಂ ಮಂಜುನಾಥಯ್ಯ ಅವರು ಗೆಲುವು ಸಾಧಿಸುತ್ತಾರೆ.  ಈ ಎರಡು ಗೆಲುವು ಕಾಂಗ್ರೆಸ್ ಪಕ್ಷದ ಆಂತರಿಕ ನಿಶಕ್ತಿಯ ಕಾರಣದಿಂದಾಗಿ ಎಂಬ ಅಂದಾಜನ್ನು ರಾಜಕೀಯ ತಜ್ಞರು ಮುಂದಿಡುತ್ತಾರೆ.

ಆದರೆ ೧೯೭೨ ರಿಂದ ೧೯೮೪ ರ ವರೆಗೆ ವಿರಾಜಪೇಟೆ ಮತ್ತು ಮಡಿಕೇರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಿಂದ ಅಭ್ಯರ್ಥಿಗಳು ಬದಲಾದರು ಪಕ್ಷವಾಗಿ ಕಾಂಗ್ರೆಸ್ ಜನರ ಅಂತಿಮ ಆಯ್ಕೆಯಾಗಿತ್ತು. ೧೯೭೨ ರಿಂದ ರಾಷ್ಟ್ರ ರಾಜಕಾರಣದಲ್ಲಿ ಇಂದಿರಾ ಯುಗ ಪ್ರಾರಂಭವಾದ ಕಾರಣದಿಂದ ಇಂದಿರಾಗಾಂಧಿ ಅವರ ಮೇಲಿನ ಅಭಿಮಾನ, ಭಕ್ತಿ, ನಂಬಿಕೆ ನಿರಂತರವಾಗಿ ಕಾಂಗ್ರೆಸ್ಸಿನ ಗೆಲುವಿಗೆ ಕಾರಣವಾಯಿತು ಇದು ಕೊಡಗಿಗೂ ಅನ್ವಯವಾಗುತ್ತದೆ.

೧೯೯೪ ರ ಜಿಲ್ಲೆಯ ರಾಜಕೀಯವನ್ನು ಅವಲೋಕಿಸಿದಾಗ ರಾಜ್ಯ ರಾಜಕೀಯದಲ್ಲಿ ಪೂರ್ಣ ಬಹುಮತದೊಂದಿಗೆ ಜನತಾದಳ ಪಕ್ಷವು ಅಧಿಕಾರ ಪಡೆದುಕೊಂಡರೆ ಕೊಡಗು ಜಿಲ್ಲೆಯಲ್ಲಿ ಭಾರತೀಯ ಜನತಾಪಕ್ಷ ಪ್ರಾಭಲ್ಯ ಮೆರೆಯಲು ಕಾರಣವಾಯಿತು. ಪಕ್ಷಗಳ ನಡುವಿನ  ತ್ರಿಕೋನ ಸ್ಪರ್ಧೆ ಮತ್ತು ಮತಗಳ ವಿಭಜನೆ ಕೂಡ ಕಾಂಗ್ರೆಸ್ಸಿನ ಸೋಲಿಗೆ ಕಾರಣವಾಗಿ ಗುರುತಿಸಬಹುದಾದರು ರಾಷ್ಟ್ರ ಮಟ್ಟದ ರಾಜಕೀಯ ಬದಲಾವಣೆ, ಬಲಪಂಥೀಯ ಹಿಂದುತ್ವ ರಾಜಕರಣ ಜಿಲ್ಲೆಯಲ್ಲಿ ಯಶಸ್ವಿಯಾಗಿದ್ದನ್ನು ಗುರುತಿಸಬಹುದು.

೧೯೯೪ರ ಚುನಾವಣೆಯಲ್ಲಿ ಪ್ರಮುಖವಾಗಿ ಗುರುತಿಸಬೇಕಾದ ಅಂಶವೇನೆಂದರೆ  ವಿರಾಜಪೇಟೆ ಎಸ್ ಟಿ ಮೀಸಲು ಕ್ಷೇತ್ರದಲ್ಲಿ ಗೆಲುವು ಪಡೆದ ಬಿಜೆಪಿ ಪಕ್ಷದ ಎಚ್.ಡಿ ಬಸವರಾಜು ಅವರು ಮೂಲತಃ ಕೊಡಗಿನವರಲ್ಲ. ಇವರು ಬೆಂಗಳೂರಿನವರು ಆ ಮೂಲಕ ಕೊಡಗಿನವರಲ್ಲದ ವ್ಯಕ್ತಿಯೊಬ್ಬರು ವಿರಾಜಪೇಟೆಯ ಶಾಸಕರಾಗಿದ್ದು ಮೊದಲು.

ಕೊಡಗಿನಲ್ಲಿ ೧೯೮೯ ರ ಚುನಾವಣೆಯಲ್ಲಿ ವಿರಾಜಪೇಟೆ ಮೀಸಲು ಕ್ಷೇತ್ರದಲ್ಲಿ ನಾಲ್ಕನೇ ಮತ್ತು ಸೋಮವಾರಪೇಟೆ, ಮಡಿಕೇರಿಯಲ್ಲಿ ಎರಡನೇ ಸ್ಥಾನ ಪಡೆದ ಬಿಜೆಪಿ ಪಕ್ಷ ೧೯೯೪ರ ಚುನಾವಣೆಯಲ್ಲಿ ಮೂರು ಸ್ಥಾನಗಳನ್ನು ತನ್ನದಾಗಿಸಿಕೊಂಡಿತು. ಬಿಜೆಪಿ ತನ್ನ ಪ್ರಾಬಲ್ಯವನ್ನು ಕೊಡಗಿನಲ್ಲಿ ಮೆರೆಯುವಾಗ ಕರ್ನಾಟಕದ ರಾಜಕಾರಣದಲ್ಲಿ ಜನತಾದಳವು ಅಧಿಕಾರದಲ್ಲಿತ್ತು ಎಂಬುದನ್ನು ಗಮನಿಸಬೇಕಾಗಿದೆ.

ರಾಜ್ಯದಲ್ಲಿ ಬಿಜೆಪಿ ಒಂದು ಪ್ರತಿಪಕ್ಷವಾಗಿ ತನ್ನ ಅಸ್ತಿತ್ವವನ್ನು ಕಂಡುಕೊಂಡಿತ್ತು. ಕೊಡಗಿನಲ್ಲಿ ರಾಷ್ಟ್ರೀಯತೆ, ಬಲಪಂಥೀಯ ಚಿಂತನಾಧಾರೆ, ಕಡೆಗೆ ಸಮಗ್ರ ವಾಲಿದ ಚಿತ್ರಣದಂತೆ ಕಾಣಿಸುತ್ತದೆ.

ಸೋಮವಾರಪೇಟೆ ಕ್ಷೇತ್ರದಲ್ಲಿ ಎಂ ಪಿ ಅಪ್ಪಚು ರಂಜನ್ ಅವರು ಪ್ರಥಮ ಪ್ರಯತ್ನದಲ್ಲಿಯೇ ಗೆಲುವು ಸಾಧಿಸಿದ್ದು ವಿಶಿಷ್ಟ.

ಈ ಚುನಾವಣೆಯು ಪೂರ್ಣ ಪ್ರಮಾಣದಲ್ಲಿ ಬಾಬರಿ ಮಸೀದಿ ಧ್ವಂಸ ಅಡ್ವಾನಿಯವರ ರಥಯಾತ್ರೆ ಇತ್ಯಾದಿಗಳ ಜೊತೆಗೆ ಸ್ಥಳೀಯ ಧರ್ಮಾಧಾರಿತ ವಿಷಯಗಳು ಚುನಾವಣಾ ವಿಷಯವಾಗಿ ಮುನ್ನಲೆಗೆ ಬಂದಿತ್ತು.

ಮಡಿಕೇರಿ ಕ್ಷೇತ್ರದಲ್ಲಿ ಟಿ.ಪಿ ರಮೇಶ್ ಅವರು ದ್ವಿತೀಯ ಸ್ಥಾನಕ್ಕೆ ತಳ್ಳಲ್ಪಡುತ್ತಾರೆ ಅವರೇನಾದರೂ ಆ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರೆ ಹಿಂದುಳಿದ ವರ್ಗಗಳ ನಾಯಕರಾಗಿ ರಾಜ್ಯ ರಾಜಕಾರಣದಲ್ಲಿ ಪ್ರವೇಶಿಸುವ ಅವಕಾಶ ಪಡೆಯುತ್ತಿದ್ದರು.

೧೯೬೭ ರಿಂದ ೨೦೦೪ ರವರೆಗೆ ವಿರಾಜಪೇಟೆ ಎಸ್.ಟಿ ಮೀಸಲು ಕ್ಷೇತ್ರವಾಗಿತ್ತು. ೨೦೦೪ ಚುನಾವಣೆ ವಿರಾಜಪೇಟೆ ಎಸ್.ಟಿ ಮೀಸಲು ಕ್ಷೇತ್ರದ ಕೊನೆಯ ಚುನಾವಣೆಯಾಗಿತ್ತು. ೨೦೦೭ರಲ್ಲಿ ನಡೆದ ಕ್ಷೇತ್ರ ಪುನರ್ ವಿಂಗಡಣೆಯ ಪ್ರಕಾರ ವಿರಾಜಪೇಟೆ ಸಾಮಾನ್ಯ ಕ್ಷೇತ್ರವಾಯಿತು.ನಂತರ ನಡೆದ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದಿಂದ ಕೆ.ಜಿ ಭೋಪಯ್ಯ  ಅವರು ನಿರಂತರ ಗೆಲುವು ಸಾಧಿಸುತ್ತಿದ್ದಾರೆ.ಹಲವಾರು ವರ್ಷಗಳ ಕಾಲ ವಿರಾಜಪೇಟೆ ಎಸ್.ಟಿ ಮೀಸಲು ಕ್ಷೇತ್ರವಾಗಿ ಗುರುತಿಸಿಕೊಂಡಿದ್ದರು ಕೂಡ ಆ ಸಮುದಾಯದ ನಾಯಕರು ರಾಜಕೀಯವಾಗಿ ಮುನ್ನಲೆಗೆ ಬರಲಿಲ್ಲ.

೧೯೯೪ರ ಕೊಡಗಿನ ವಿಧಾನಸಭೆಯ ಚುನಾವಣೆಯು ಧರ್ಮಾಧಾರಿತ ಚುನಾವಣೆಯಾಗಿತ್ತು.ಆ ನಂತರ ಕೋಮು ಆಧಾರಿತ ಚುನಾವಣೆ ನೆಲೆ ಸ್ವಲ್ಪಮಟ್ಟಿಗೆ ತಗ್ಗಿತು.

ಆದರೆ ೨೦೧೩ರ ನಂತರ ದೇಶದಲ್ಲಿ ಬದಲಾದ ರಾಜಕೀಯ ಸನ್ನಿವೇಶವು ಕೊಡಗಿನ ರಾಜಕೀಯ ಕ್ರಿಯಾ ನೆಲೆಗಟ್ಟನ್ನೆ ಬದಲಾಯಿಸಿತು.

ಲೋಕಸಭಾ ಚುನಾವಣೆಯ ಪ್ರವೃತ್ತಿಯನ್ನು ಗಮನಿಸಿದಾಗ ಕೂಡ ಕೊಡಗು ೧೯೯೦ ರ ನಂತರ ಭಾರತೀಯ ಜನತಾ ಪಕ್ಷದ ಕಡೆ ವಾಲಿದನ್ನು ಗುರುತಿಸಬಹುದು.೨೦೦೯ ರಲ್ಲಿ ಕ್ಷೇತ್ರ ಪುನರ್ ವಿಂಘಡನೆಯಾಗಿ ಕೊಡಗು-ಮೈಸೂರು ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಹೆಚ್ ವಿಶ್ವನಾಥ್ ಅವರು ಗೆಲುವು ಸಾದಿಸಿದರು ಕೂಡ ಕೊಡಗಿನ ಮತ ಪ್ರಮಾಣ ಅವಲೋಕಿಸಿದಾಗ ಭಾರತೀಯ ಜನತಾ ಪಕ್ಷವೇ ಹೆಚ್ಚು ಪಡೆದಿತ್ತು.ಕೊಡಗು ಜಿಲ್ಲೆಯ ಮಟ್ಟಿಗೆ ೧೯೯೦ ರ ನಂತರ ಭಾರತೀಯ ಜನತಾ ಪಕ್ಷ ಸಂಘಟನಾತ್ಮಕವಾಗಿ ದೃಡವಾಗಿದೆ ಎಂದೇ ಪರಿಗಣಿಸಬೇಕಾಗಿದೆ.

ಪ್ರಾಕಲ್ಪನೆ ಒಂದು ಚರ್ಚೆಯು ಕೊಡಗಿನ ರಾಜಕಾರಣದ ಮೇಲೆ ಜಾತಿ ರಾಜಕಾರಣ ಪ್ರಭಾವ ಬೀರಿಲ್ಲ ಎಂಬುದನ್ನು ಗುರುತಿಸಲಾಗಿತ್ತು. ಈ ವಾದ ಸರಣಿಗೆ ಹೆಚ್ಚು ಪ್ರಾಶಸ್ತ್ಯ ಕಲ್ಪಿಸಲು ಸಾಧ್ಯವಿಲ್ಲ. ಕಾರಣ ಆರಂಭದಲ್ಲಿ ಕಾಂಗ್ರೆಸ್ ಪಕ್ಷದ ಭದ್ರಕೋಟೆಯಾದ ಕೊಡಗು ಕಾಂಗ್ರೆಸ್ ಪಕ್ಷಾಧಾರಿತ ರಾಜಕರಣವು ೧೯೯೦ರ ವರೆಗೆ ಮುನ್ನಲೆಗೆ ಬಂದಿತ್ತು.

೧೯೮೦ರ ದಶಕದಲ್ಲಿ ಎರಡು ಬಾರಿ ಸೋಮವಾರಪೇಟೆ ವಿಧಾನಸಭಾ ಕ್ಷೇತ್ರದಿಂದ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ದಿವಂಗತ ಆರ್ ಗುಂಡುರಾವ್ ಅವರು ಗೆಲುವನ್ನು ದಾಖಲಿಸುತ್ತಾರೆ. ನಂತರ ಬಂದ ಕೊಡವ ಸಮುದಾಯದ ಬೆಳ್ಳಿಯಪ್ಪ ಅವರು ಶಾಸಕರಾಗಿ ಆಯ್ಕೆಯಾಗುತ್ತಾರೆ. ಈ ಕ್ರಿಯಾವಿಧಿ ಗಮನಿಸಿದಾಗ ಸೋಮವಾರಪೇಟೆಯಲ್ಲಿ ೧೯೯೦ರ ದಶಕದವರೆಗೂ ಕಾಂಗ್ರೆಸ್ ಪಕ್ಷದ ಮೇಲಿನ

ಒಲವಿನಿಂದಲೇ ಇವರುಗಳು ಜಯ ದಾಖಲಿಸಿದ್ದಾರೆಯೇ ವಿನಃ ಜಾತಿಯೋ, ಧರ್ಮವೋ, ವ್ಯಕ್ತಿಯೋ ಇಲ್ಲಿ ಮುಖ್ಯವಾಗಲಿಲ್ಲ. ಪಕ್ಷವೇ ಮುಖ್ಯ ಪಾತ್ರ ವಹಿಸಿದೆ.

೧೯೯೯ರ ಚುನಾವಣಾ ಪ್ರಕ್ರಿಯೆಯಲ್ಲಿ ಸೋಮವಾರಪೇಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಜಾತಿ ಆಧಾರಿತವಾಗಿ ಅಭ್ಯರ್ಥಿಯನ್ನು ಚುನಾವನಾ ಕಣಕ್ಕೆ ಇಳಿಸಲು ಆರಂಭಿಸಿತು. ಕಾಂಗ್ರೆಸ್ ಒಕ್ಕಲಿಗರನ್ನೇ ತನ್ನ ಅಭ್ಯರ್ಥಿಯಾಗಿಸಿತು. ಆದರೆ ಅಷ್ಟೊತ್ತಿಗಾಗಲೆ ಬಾಬರ್ ಮಸೀದಿ ಧ್ವಂಸದ ಕಾರಣ ಹಿಂದೂ ಮತಗಳ ಧ್ರುವೀಕರಣ, ಬಿಜೆಪಿಯ ಧರ್ಮಾಧಾರಿತ, ಸಂಘಟನಾತ್ಮಕ ರಾಜಕಾರಣ ಪ್ರಬಲ ಸಮುದಾಯವಾದ ಅರೆಗೌಡ ಅಭ್ಯರ್ಥಿಗಳನ್ನು ಮೀರಿ ಬಿ.ಜೆ.ಪಿ ಯ ಎಂ.ಪಿ ಅಪ್ಪಚ್ಚುರಂಜನ್ ಅವರನ್ನು ಗೆಲ್ಲಿಸುವಲ್ಲಿ ಯಶಸ್ವಿಯಾಯಿತು. ೨೦೦೪ ರ ಚುನಾವಣೆಯಲ್ಲಿ ಮಾತ್ರ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ನ ಬಿ.ಎ ಜೀವಿಜಯ ಎಂಬ ಗೌಡ ಅಭ್ಯರ್ಥಿಯು ಗೆಲುವನ್ನು ದಾಖಲಿಸಿದರು. ಮುಂದೆ ಮತ್ತೆ ಮೂರು ಬಾರಿಯೂ ಅಪ್ಪಚ್ಚು ರಂಜನ್ ಗೆಲುವನ್ನು ಸಾಧಿಸುತ್ತಾ ಬಂದರು

೧೯೮೯ ರಲ್ಲಿ ಕೊಡವ ಸಮುದಾಯಕ್ಕೆ ಸೇರಿದ ಕಾಂಗ್ರೆಸ್ ಪಕ್ಷದ ಬೆಳ್ಳಿಯಪ್ಪನವರು ಗೌಡ ಸಮುದಾಯವೇ ಹೆಚ್ಚಿದ್ದ ಸೋಮವಾರಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಗೆಲುವು ದಾಖಲಿಸಿದರು. ಅಲ್ಲದೆ ಇದೇ ಕ್ಷೇತ್ರದಲ್ಲಿ ಗೌಡರು, ಲಿಂಗಾಯಿತರು, ಮುಸಲ್ಮಾನರು ಹೆಚ್ಚಿದ್ದರು ಸತತ ಐದು ಬಾರಿ ಬಿ.ಜೆ.ಪಿ ಪಕ್ಷದಿಂದ ಎಂ.ಪಿ ಅಪ್ಪಚ್ಚು ರಂಜನ್ ಎಂಬ ಕೊಡವ ಜಾತಿಗೆ ಸೇರಿದ ವ್ಯಕ್ತಿಯು ಶಾಸಕರಾಗಿ, ಸಚಿವರಾಗಿ ಆಯ್ಕೆಯಾಗಿದ್ದು ಜಾತಿ ಆಧಾರಿತ ರಾಜಕೀಯ ಪ್ರವೃತ್ತಿಯಿಂದಲ್ಲ. ಬಿಜೆಪಿ ಕೊಡಗಿನಲ್ಲಿ ಪೂರ್ಣ ಪ್ರಮಾಣದ ಧರ್ಮದಾರಿತ ಮತ್ತು ಪಕ್ಷ ಸಂಘಟನಾತ್ಮಕ ಆಯಾಮದಲ್ಲಿಯೇ ಗೆಲುವನ್ನು ಪಡೆದುಕೊಂಡಿತು.

ಇನ್ನೂ ವಿರಾಜಪೇಟೆ ಮತ್ತು ಮಡಿಕೇರಿ ಕ್ಷೇತ್ರಗಳು ಸಹ ಜಾತಿ ಆಧಾರಿತ ರಾಜಕಾರಣವು ಮುಂದು ಮಾಡಲಿಲ್ಲ. ವಿರಾಜಪೇಟೆಯಲ್ಲಿ ಹೆಚ್ಚಿದ್ದ ಕೊಡವರು ಕೆ.ಜಿ ಭೋಪಯ್ಯ ಎಂಬ ಗೌಡ ಸಮುದಾಯದ ವ್ಯಕ್ತಿಯನ್ನು ಆರಿಸಿದರು ಇದೇ ಮಾತು ಮಡಿಕೇರಿಗೂ ಅನ್ವಯವಾಗುತ್ತದೆ.

ಈ ಹಿನ್ನೆಲೆಯಿಂದ ಕೊಡಗಿನ ರಾಜಕಾರಣದ ಮೇಲೆ ಜಾತಿ ರಾಜಕಾರಣವು ಪ್ರಭಾವ ಬೀರಿಲ್ಲ ಎಂಬುದು ಸ್ಪಷ್ಟ.

ಇತ್ತೀಚಿನ ಕೊಡಗಿನ ರಾಜಕಾರಣವು ಬಲಪಂಥೀಯ ಮತ್ತು ಕೋಮು ಆಧರಿತ ಅಥವಾ ಧರ್ಮಾಧಾರಿತ ರಾಜಕೀಯದ ಕಡೆಗೆ ವಾಲಿದೆ.

ಈ ಮಾತು ಅಕ್ಷರಸಹ ಸತ್ಯವಾಗಿದೆ. ರಾಜಕೀಯ ವಿಶ್ಲೇಷಕರ ಪ್ರಕಾರ ೧೯೯೦ ರಿಂದ ೨೦೧೮ ರವರೆಗೆ ದೇಶ ಮತ್ತು ರಾಜ್ಯದಲ್ಲಿ ವಿಶೇಷವಾಗಿ ಕೊಡಗಿನಲ್ಲಿ ನಡೆದ ಕೋಮು ವಿಚಾರಗಳು ರಾಜಕೀಯವಾಗಿ ಚರ್ಚಿಸಲ್ಪಟ್ಟ ಸಾಮಾಜಿಕವಾಗಿ ಪರಿಣಾಮವನ್ನುಂಟು ಮಾಡಬಲ್ಲ ಮಾನಸಿಕವಾಗಿ ಮನುಷ್ಯರ ಆಂತರ್ಯದಲ್ಲಿ ಉಳಿಯಬಲ್ಲ ಬಹು ಮುಖ್ಯ ಅಂಶವಾಗಿ ರೂಪ ಪಡೆಯಿತು.

೧೯೯೨ರ ರಾಮ ಜನ್ಮಭೂಮಿ ವಿವಾದ, ರಥಯಾತ್ರೆಯ ರಾಜಕಾರಣ, ಕೋಮು ಧ್ರುವೀಕರಣ, ವಿಘಟನಾತ್ಮಕ ಸಾಮಾಜಿಕ ಸಂರಚನೆಯು ಕೊಡಗಿನ ಮೂವತ್ತು ವರ್ಷಗಳ ರಾಜಕೀಯ ಪರಿಪ್ರೇಕ್ಷೆಯನ್ನು ರೂಪಿಸಿತು. ಪಾಲೂರು ಘಟನೆ, ಟಿಪ್ಪು ಜಯಂತಿ, ದೇವಟ್ಟಿಪರಂಬ್ ಪ್ರಸಂಗಗಳು ಬಿಜೆಪಿ ಪಕ್ಷಕ್ಕೆ ರಾಜಕೀಯ ಅಸ್ತ್ರವಾಗಿ ಚುನಾವಣೆಯ ಗೆಲುವಿಗೆ ಪೂರಕವಾಗಿ ವರ್ತಿಸಿದವು.

೧೯೯೦ರ ದಶಕದಲ್ಲಿ ಕೊಡಗಿನ ರಾಜಕೀಯದಲ್ಲಿ ಶಕ್ತವಾಗಿದ್ದ  ತೋಟಕಾರ್ಮಿಕರ ಜೊತೆಗೆ ಹೋರಾಟದ ಸಂಬಂಧವನ್ನು ಹೊಂದಿದ್ದ ಎಡಪಂಥೀಯ ಕಮ್ಯೂನಿಸ್ಟ್ ಪಕ್ಷ, ಸಮಾಜವಾದಿ ಪಕ್ಷ, ಜನತಾ ಪರಿವಾರದಂತಹ ಪರ್ಯಾಯ ರಾಜಕೀಯ ಪಕ್ಷಗಳು ಹೆಚ್ಚು ಪ್ರಚುರವಾಗದೆ, ತೆರೆಮರೆಗೆ ಸರಿಯಲ್ಪಟ್ಟಿತ್ತು. ೧೯೯೪ ರ ನಂತರ ಕೊಡಗಿನಲ್ಲಿ ಕಾಂಗ್ರೆಸ್ ಪ್ರತಿಪಕ್ಷವಾಗಿ ತನ್ನ ಕಾರ್ಯವನ್ನು ನಿರ್ವಹಿಸುವಲ್ಲಿ ವಿಫಲವಾಯಿತು. ಈ ಎಲ್ಲಾ  ಅಂಶಗಳನ್ನು ಪರಿಶೀಲಿಸಿದಾಗ ಊಹೆ ಸರಿಯಾದದ್ದಾಗಿದೆ.

೧೯೫೬ರ ರಾಜ್ಯ ಪುನರ್ ವಿಂಗಡನೆಯ ನಂತರ ಕೊಡಗನ್ನು ಮೈಸೂರು ರಾಜ್ಯದ ಜೊತೆಗೆ ವಿಲೀನಿಕರಿಸುವ ಮೂಲಕ ಪ್ರತ್ಯೇಕತೆಯ ಹೋರಾಟದ ಧ್ವನಿಯು ಆರಂಭವಾಯಿತು ಎನ್ನಬಹುದು. ಸ್ವಾತಂತ್ರ್ಯ ಪಕ್ಷ ಎಂಬ ಪ್ರಾದೇಶಿಕತೆಯನ್ನೂ, ಕೊಡುವ ಅಸ್ಮಿತೆಯ ಪ್ರತಿಪಾದಿಸುವ ಪಕ್ಷವು ವಿಲೀನ ಪ್ರಕ್ರಿಯೆಯನ್ನು ವಿರೋಧಿಸಿ ಆ ಕಾಲದ ಚುನಾವಣೆಯಲ್ಲಿ ಸ್ಪರ್ಧಿಸಿ ರಾಜಕೀಯ ಪ್ರತಿರೋಧವನ್ನು ತೋರಿದರು. ಈ ಚುನಾವಣೆಯಲ್ಲಿ ಕೆಲವು ಕಡೆ ಸ್ವತಂತ್ರ್ಯ ಪಕ್ಷವು ಜಯಗಳಿಸುವ ಮೂಲಕ ಜನಸಮುದಾಯದೊಳಗೆ ಅಡಗಿರುವ ವಿಲೀನ ವಿರೋಧಿ ಧೋರಣೆಯು ಮುನ್ನಲೆಗೆ ಬಂದಿತು. ೧೯೯೦ರ ನಂತರ ಕೊಡಗು ಪ್ರತ್ಯೇಕ ರಾಜ್ಯವಾಗಬೇಕು ಎಂಬ ಕೂಗು, ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಂಡಿತು. ಮಾಥಂಡ ಮೊಣ್ಣಪ್ಪ ಎನ್.ಯು ನಾಚಿಪ್ಪ ನಂತಹ ಕೊಡವ ಸಮುದಾಯದ ನಾಯಕರು ಕೊಡವ ಅಸ್ಮಿತಿಯ ಆಧಾರದಲ್ಲಿ ಪ್ರತ್ಯೇಕ ಕೊಡುವ ಭೂಮಿ, ಕೊಡವ ರಾಜ್ಯದ ಹಕ್ಕು ಅಥವಾ ಸ್ವಾಯತ್ತತೆಯ ಕೊಡಗನ್ನು ರೂಪಿಸುವ ಚಳವಳಿಗೆ ಜಾತಿ ಮೂಲದ, ಸಮುದಾಯ ಮೂಲದ ಪರಿಪ್ರೇಕ್ಷೆಯನ್ನು ಮುನ್ನಲೆಗೆ ತಂದರು. ಲಿವಾಕ್, ಕೆ.ಆರ್.ಎಂ.ಎಂ, ಸಿ.ಎನ್.ಸಿ ಯಂತಹ ಪ್ರತಿರೂಪದ ಕೊಡುವ ಸಾಂಸ್ಥಿಕ

